ಸುವರ್ಣಯುಗದಲ್ಲಿ ಸುವರ್ಣಕಾರನಾದ (ಕಲಾದಕ)
ಕುಲಶೇಖರ ದೈವಜ್ಞಬ್ರಾಹ್ಮಣನಿಗೆ
ಒಲಿದು ಬಂದ ಹಯಗ್ರೀವ



ಶ್ರೀ ಶ್ರೀ ವಾದಿರಾಜ ಗುರು

◆ ಸಂಗ್ರಹ: ಯು. ಬಾಲಚಂದ್ರ, ರಾಯ್ಕರ್


SODE MATHA DAIVAJNA

BRAMAN SHISHYA VRUND





1008 ಶ್ರೀ ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು * ಶ್ರೀ ಶ್ರೀ 1008 ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದಂಗಳವರು


BHAVEE SAMEERA SHRI SHRI GURU VADIRAJA SWAMIJI
Idea Conceived By
Ambhranee U.Balachandra Raiker
Coibatore
DAIVAJNA BRAHMINS COMMUNITY HAS BEEN DECLARED AS THE DISCIPLES OF SRI SODE MUTT, UDUPI

ಸುವರ್ಣಯುಗದಲ್ಲಿ ಸುವರ್ಣಕಾರನಾದ (ಕಲಾದಕ) ಕುಲಶೇಖರ ದೈವಜ್ಞ ಬ್ರಾಹ್ಮಣನಿಗೆ ಒಲಿದು ಬಂದ ಹಯಗ್ರೀವ

ಯು. ಬಾಲಚಂದ್ರ ರಾಯ್ಕರ್

ಪ್ರಕಾಶಕರು :
ಶ್ರೀ ಯು. ಬಾಲಚಂದ್ರ ರಾಯ್ಕರ್
ಶ್ರೀಮತಿ ಶಾರದಾ ರಾಯ್ಕರ್
206 ಎ, ಪಳನಿಸ್ವಾಮಿ ಕಾಲೋನಿ
ಪೊನ್ನೈರಾಜಪುರಂ
ಕೊಯಮುತ್ತೂರು – 641001
ದೂರವಾಣಿ : 09043699831/8148480177

Suvarnayugadalli Suvarnakaranada (kaladaka)

Kulashekara Daiwajna Brahmananige Olidu Banda Hayagreeva

A book written & published By U. Balachandra Raikar & Smt. Sharada Raikar, 206A,Palaniswami colony, ponnairajapuram, Coimbatore - 641001 Mobile:09043699831/ 8148480177

ವಿಶೇಷ ಸಹಕಾರ : ಶ್ರೀ ಸಿ. ಅಭಿಷೇಕ್, ಎಮ್.ಕಾಂ., ಎಮ್.ಎ., ಮುಂಬಯಿ,

ಶ್ರೀ ಎ. ಪ್ರಕಾಶ ರಾವ್, ಸುಮನ್ ಜುವೆಲರ್ಸ್, ಕೊಯಮುತ್ತೂರು

ಶ್ರೀ ಕೆ.ವಿ. ಪಾಂಡುರಂಗ ರಾವ್, ಸಾವಿತ್ರಿನಗರ, ಕೊಯಮುತ್ತೂರು

ಶ್ರೀ ಕೆ. ಸರ್ವೋತ್ತಮರಾವ್ "ಪವಿತ್ರನಿಲಯ", ಕೊಯಮುತ್ತೂರು.

ಮೊದಲ ಮುದ್ರಣ	: 2012
ಪ್ರತಿಗಳು	: 1000
ಪುಟಗಳು	: 32
ಹಕ್ಕುಗಳು	: ಲೇಖಕರು
ಮುಖಪುಟ ವಿನ್ಯಾಸ	: ಜೇಮ್ಸ್ ವಾಜ್
ಅಕ್ಷರ ಸಂಯೋಜನೆ	: ಸೀತಾ ಗ್ರಾಫಿಕ್ಸ್, ಉಡುಪಿ, 9901728373
ಮುದ್ರಕರು	: ಪ್ರೇಮಸಾಯಿ ಪ್ರಿಂಟರ್ಸ್, ಮಂಗಳೂರು.

॥ ಶ್ರೀಪತಿರ್ಮಾನದೋ ನ ॥
॥ ಶ್ರೀಮಧ್ವವಾದಿರಾಜೋ ವಿಜಯತೇ ॥
॥ ಶ್ರೀ ಭೂತರಾಜಾಯ ನಮಃ ॥

ಕರುಣಾಕರ ಕರುಣೆ – ಮನನಶೀಲ ಮುನಿ
ಶ್ರೀ ಶ್ರೀ ವಿಶ್ವೋತ್ತಮತೀರ್ಥರು

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋನಮಃ॥

ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟ ಫಲಪ್ರದಾ।
ತಥಾ ಕಲೌ ವಾದಿರಾಜ ಶ್ರೀಪಾದೋಷ್ಟದ ಸತಾಮ್ ॥

ಭೂತರಾಜ ನಮಸ್ತುಭ್ಯಂ ವಾದಿರಾಜ ಗುರುಪ್ರಿಯ ।
ವಿಧ್ಯವ್ಯ ಸರ್ವಭಾದಾಂ ನಃ ಸದಾ ತ್ವ ರಕ್ಷಣಂ ಕುರು ॥

ಕೋಲವ್ಯಾಸ ಹಯಗ್ರೀವ ಪದಕಂಜ ಮಧುವ್ರತಂ ।
ಶ್ರೀ ವಿಶ್ವೋತ್ತಮಯೋಗೀಂದ್ರಂ ವಂದೇಹಂ ವಾದಿರಾಜ ಪ್ರಿಯಂ ॥

ಪವಿತ್ರ ಭಾರತಭೂಮಿ ಪ್ರಸಿದ್ಧ ಕರ್ಮಭೂಮಿ. ಇದು ಸಾಧನ ಭೂಮಿಯೂ ಹೌದು. ದುಷ್ಟಶಿಕ್ಷಣ ಶಿಷ್ಟಪರಿಪಾಲನೆಗಾಗಿ ಶ್ರೀಹರಿ ಅವತರಿಸುವ ಅವತಾರ ಭೂಮಿ. ಆ ದೇವನಾಜ್ಞೆಯಂತೆ ದೇವಾನುದೇವತೆಗಳು. ಋಷಿಮುನಿಗಳು ವಿಶಿಷ್ಟಸಾಧನೆಗಾಗಿ ಒಂದೊಂದು ರೂಪದಿಂದ ಅವತರಿಸಿ ಸಾಧನೆಗೈದು, ಇತರ ಸುಜೀವಿಸಾಧಕರಿಗೂ ಸಾಧನದ ಮಾರ್ಗ ತೋರಿ ಉದ್ಧೃತರಾಗುವರು ಈ ಪುಣ್ಯ ಭೂಮಿಯಲ್ಲಿ. ವಾಯ್ವಾದಿ ಋಜುದೇವತೆಗಳು, ರುದ್ರಾದಿ ಇತರ ದೇವತೆಗಳೂ ಯುಗಾಂತರದಲ್ಲಿ ಅವತರಿಸಿದಂತೆ ಈ ಕಲಿಯುಗದಲ್ಲಿಯೂ ಅವತರಿಸಿ ಲೋಕೋದ್ಧಾರಗೈದಿದ್ದಾರೆ. " ತ್ವಂ ಮಧ್ವಂ ಮಾರುತಂ ಸರ್ವೇ ಪರಿವಾರತಯಾ ಸದಾ । ಸಂಸೇವಿತುಂ ಸುರಾ ಭೂಮೌ ಅವತೇರುರಿತಿ ಸ್ಫುಟಮ್ ॥" ಎನ್ನುವ ಪುರಾಣೋಕ್ತಿಯಂತೆ, ಶ್ರೀ ವಾಯುದೇವರು ಮಧ್ವತೇನ ಅವತರಿಸಿ ಸಿದ್ಧಾಂತ ಸ್ಥಾಪನೆಗೈದು ಶಿಷ್ಟಸದಾಚಾರವನ್ನು ಜಗತ್ತಿಗೆ ನೀಡಿದ ಮೇಲೆ, ಅದನ್ನೆಲ್ಲ ಅನುಸರಿಸಿ ಸೇವಿಸಲು ದೇವಾನುದೇವತೆಗಳೇ ಈ ಧರೆಗೆ ಇಳಿದು ಬಂದರು. ಆಚಾರ್ಯ ಮಧ್ವರಿಂದ ಪ್ರವರ್ತಿತ

ಅನೇಕ ಪರಂಪರೆಗಳಲ್ಲಿ ಪೀಠಾಧಿಪತಿಗಳಾಗಿ, ಸಿದ್ಧಾಂತ ಸೇವೆಗೈಯುತ್ತಾ ಶಿಷ್ಟ ಸಂಪ್ರದಾಯವನ್ನು ಮುಂದುವರಿಸಿ ಪ್ರಚುರಪಡಿಸಿ ಊರ್ಜಿತಗೊಳಿಸಿದರು.ಇದರಿಂದಾಗಿ ತತ್ವದ ಅರಿವು ಹಾಗೂ ಸದಾಚಾರದ ಶ್ರದ್ಧೆ ಸಜ್ಜನರ ಮನಸ್ಸಿನಲ್ಲಿ ಅಂಕುರಿಸಿತು. ನಿರ್ದಿಷ್ಟ ಅನುಷ್ಠಾನ ಹಾಗೂ ಬೋಧನೆ ಅವರುಗಳ ತನು ತಟ್ಟಿ ಮನ ಮುಟ್ಟಿತು. ಏತಾದೃಶ ಲೋಕೋತ್ತರ ಸೇವಾಸಾಧನವನ್ನು ಸಾಧಿಸಿದ ಅನೇಕ ಪರಂಪರೆಗಳಲ್ಲಿ "ವೇದಾಂತಗುರುಸೋದರ" ಖ್ಯಾತಿ ವಿಖ್ಯಾತ ಶ್ರೀ ವಿಷ್ಣುತೀರ್ಥಾಚಾರ್ಯರ ಪರಂಪರೆ ಪ್ರಸಿದ್ಧವಾದದ್ದು. ಭಾವಿಸಮೀರ ಶ್ರೀವಾದಿರಾಜರು, ಇಂದ್ರ ಪದಾರ್ಹ ಶ್ರೀವೃಂದಾವನಾಚಾರ್ಯರೇ ಮೊದಲಾದ ಮಹಿಮಾನ್ವಿತ ಮಹನೀಯರಿಂದ ವಿಜೃಂಭಿತವಾದದ್ದು ಈ ಪರಂಪರೆ. ಈ ಪರಂಪರೆಯ ಪೀಠಾಧಿಪತಿಗಳಾಗಿ ಕಳೆದ ಶತಮಾನದ ಉತ್ತರಾರ್ಧ ಹಾಗೂ ಈ ಶತಮಾನದ ಮೊನ್ನೆಯವರೆಗೂ ಮಹಿತರಾಗಿ ಮೆರೆದವರು ಶ್ರೀ ಶ್ರೀ ವಿಶ್ವೋತ್ತೋಮ ತೀರ್ಥ ಶ್ರೀಪಾದರು.

ಶ್ರೀವಿಶ್ವೋತ್ತಮತೀರ್ಥರು ಯತ್ಯಾಶ್ರಮ ನಿಷ್ಠೆಯ ನಿಷ್ಠಾವಂತ ಹಾಗೂ ಶಿಸ್ತಿನ ಸರದಾರ. ಸಿದ್ಧಾಂತದೀಕ್ಷಾಸಂಪನ್ನ ಸೇನಾನಿ. ಮಾನಸಿದ್ಧ ಪ್ರಮೇಯವನ್ನು ಚಿಂತನಗೈವ ಮನನಶೀಲಮುನಿ. ಕಾಲನಾಮಕ ಹರಿಯ ಅಣತಿಯಂತೆ ಸಾರಾಸಾರ ವಿವೇಕ, ಧರ್ಮಾಧರ್ಮದ ಸೂಕ್ಷ್ಮ ಅರಿವು. ಯತ್ಯಾಶ್ರಮದ ಶಿಸ್ತು ಪ್ರಶಸ್ತವಾಗಿ ತೋರುವದು ಶ್ರೀವಿಶ್ವೋತ್ತಮತೀರ್ಥರಲ್ಲಿ ದೇಹದ ಸೌಷ್ಠವಕ್ಕೆ ತಕ್ಕ ಎತ್ತರದ ನಿಲುವು. ಪ್ರಸನ್ನವದನದಲ್ಲಿ ಮಿಂಚುವ ಮಂದಹಾಸ, ಅಂತಃಕರಣದ ಕಿಡಿ ಇಡಿಯಾಗಿ ಹೊರಸೂಸುವ ನೇರನೋಟ, ಭಕ್ತರ ದುಃಖ ದುಮ್ಮಾನಗಳನ್ನು ಆಲಿಸಿ ಅರಿಯುವ ತಾಳ್ಮೆ, ಸುಜನ ಭಕುತರ ಕ್ಷೇಮಕ್ಕೆ ಪ್ರಾರ್ಥಿಸುವ ಪ್ರಕಾರ, ಶ್ರೀಹರಿಗುರುಸ್ಮರಣೆಯೊಂದಿಗೆ ಸಾನುಗ್ರಹಪರಿಹಾರೋಪಾಯ ಕಲ್ಪಿಸುವ ಕಡುಕಾರುಣ್ಯದ ನುಡಿ – ಇವೆಲ್ಲ ನಿರ್ಭರವಾಗಿ ಕಾಣಸಿಗುವದು ಭಾವಿಸಮಿರ ಶ್ರೀವಾದಿರಾಜ ಗುರುಪೀಠಾಧಿರೂಢ ಶ್ರೀವಿಶ್ವೋತ್ತಮತೀರ್ಥರು.

ಪೂಜ್ಯಶ್ರೀಗಳವರು ಜನಿಸಿದ್ದು ಕ್ರಿ. ಶ. 1934 ಶ್ರೀಮುಖ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿಯಂದು. ಉಡುಪಿಯ ಸಮೀಪದ ಉದ್ಯಾವರ ಗ್ರಾಮವೇ ಅವರ ಜನ್ಮಸ್ಥಳ. ಅಲ್ಲಿ ವಾಸವಾಗಿದ್ದ ಶ್ರೀಮತಿ ಕೃಷ್ಣವೇಣಿ ಮತ್ತು ಶ್ರೀಕೃಷ್ಣಾರ್ಯ ದಂಪತಿಗಳ ಮುದ್ದು ಕುವರರಾದ ಇವರ ಪೂರ್ವಾಶ್ರಮವಾದ 'ಮಾಧವ' ಜಾತಕರ್ಮ, ನಾಮಕರಣ, ಉಪನಯನಾದಿ ಸಂಸ್ಕಾರ ಸಂಸ್ಕೃತರಾಗಿ ಆಗಿನ ಶ್ರೀಸೋದೆ ಮಠದ ಪೀಠಾಧಿಪತಿಗಳಾಗಿದ್ದ

ಶ್ರೀವಿಶ್ವೇಂದ್ರ ತೀರ್ಥ ಶ್ರೀಪಾದರ ದೃಷ್ಟಿದೃಷ್ಟರಾದರು. ಮಾಧವಾಚಾರ್ಯರಿಗೆ ತುರ್ಯಾಶ್ರಮ ನೀಡಿ ಮಧ್ವ – ಭಾವಿಮಧ್ವರ ಪರಂಪರೆಗೆ ಉತ್ತರಾಧಿಕಾರಿಗಳನ್ನಾಗಿಸಲು ಗುರುಗಳು ಇಚ್ಛಿಸಿದಾಗ ಕೃಷ್ಣಾರ್ಯ ದಂಪತಿಗಳು ಒಪ್ಪಲಿಲ್ಲ. ನಂತರ ಹಯರೂಪದ ಹಯವದನ ಸ್ವಪ್ನ ಸೂಚನೆ ಇತ್ತ. ಮುಗ್ಧ ಮಾತಾ ಪಿತೃಗಳು ಮುದ್ದು 'ಮಾಧವ' ನನ್ನು ಮಾಧವನ ಸೇವೆಗಾಗಿ ಗುರುಗಳಿಗೆ ಒಪ್ಪಿಸಿದರು. ಕ್ರಿ. ಶ. 1943 ಸ್ವಭಾನು ಸಂವತ್ಸರದ ಭಾದ್ರಪದ ಶುದ್ಧ ಚತುರ್ಥಿಯಂದು ಗುರುಗಳಾದ ಶ್ರೀ ಶ್ರೀ ವಿಶ್ವೇಂದ್ರತೀರ್ಥರು ಮಾಧವಚಾರ್ಯರಿಗೆ ಆಶ್ರಮ ನೀಡಿ 'ಶ್ರೀವಿಶ್ವೋತ್ತಮತೀರ್ಥ' ರೆಂದು ಹೆಸರಿಸಿ ಶಿಷ್ಯರೆಂದು ಸ್ವೀಕರಿಸಿದರು. ವಿಘ್ನೇಶನ ಚತುರ್ಥಿಯಾದ್ದರಿಂದ ಶ್ರೀಗಳವರ ಆಶ್ರಮ ಜೀವನ ನಿರ್ವಿಘ್ನವೆಂದು ಸೂಚನೆಯಾಯಿತು. ಆಶ್ರಮ ಸ್ವೀಕಾರದಿಂದ ಶ್ರೀಗಳವರ ವ್ಯಕ್ತಿತ್ವ ಪುಟಕ್ಕಿಟ್ಟ ಬಂಗಾರವಾದಂತಾಯಿತು.

ಕಾಲನಾಮಕ ಹರಿಯ ಕರುಣಪಾತ್ರರಾದ ಶ್ರೀಗಳವರ ಸಮಯಪ್ರಜ್ಞೆ ಹಾಗೂ ಶಿಸ್ತು ಮೆಚ್ಚುವಂಥಹದು. 73 ವಸಂತಗಳನ್ನು ಕಂಡು ಬದುಕಿದ ಅವರ ಆಶ್ರಮ ಜೀವನದ ಅವಧಿಯೇ 64 ವರುಷದ್ದು. ಗುರುಗಳಾದ ಶ್ರೀವಿಶ್ವೇಂದ್ರತೀರ್ಥ ಶ್ರೀಪಾದರು ಶಿಷ್ಯ ಆಶ್ರಮ ನಂತರ ಬಹಳ ದಿನ ಬದುಕಲಿಲ್ಲ. ಕೇವಲ ಒಂದು ತಿಂಗಳು ಐದು ದಿನಗಳು ಮಾತ್ರ . ಅಂದಿನಿಂದ ಸುಮಾರು 63 ವರ್ಷ ಅವಧಿಯಷ್ಟು ಬೇರೊಬ್ಬರ ಸಹಾಯವಿಲ್ಲದೆ ಪೂಜಾದಿ ಕೈಂಕರ್ಯವನ್ನು ಒಬ್ಬರೇ ವಿಧಿವತ್ತಾಗಿ ಅಚ್ಚುಕಟ್ಟಾಗಿ ಸಮಯಕ್ಕನುಗುಣವಾಗಿ ನಡೆಸಿಕೊಂಡು ಬಂದರು ಮತ್ತು ಶ್ರೀ ಗುರು ವಾದಿರಾಜರ ಋಜುತ್ವಮಹಿಮಾ ಪ್ರಸಾರವನ್ನು ಜೀವನದಲ್ಲಿ ಯಾವುದಾದರೊಂದು ಪ್ರಕಾರದಿಂದ ಗೈದು ಜೀವನ ಸಾರ್ಥಕಗೊಳಿಸಬೇಕೆಂದು ಅಪ್ಪಣೆಯಿತ್ತರು.

ಅವರು ಎಪ್ಪತ್ಮೂರು ವಸಂತಗಳನ್ನು ಪೂರೈಸಿದ ಪೂಜ್ಯ ಶ್ರೀಗಳವರ ಬದುಕು ಅರ್ಥಪೂರ್ಣ ಹಾಗೂ ಸಾರ್ಥಕ. ಆ ಹಸನಾದ ಸಾತ್ವಿಕ ಬದುಕು ಸಾಧಕರಿಗೆಲ್ಲ ಆದರ್ಶಪ್ರಾಯ. ಅವರು ಆದರ್ಶ ಅಭಿಮಾನಾದಿಗಳಿಂದ ದೂರಾಗಿದ್ದರು. ಅವರೆಂದೂ ಪ್ರಾದೇಶಿಕ ಭೇದವನ್ನು ಭಕ್ತವರ್ಗದಲ್ಲಿ ಅಭಿಮಾನಾದಿ ಅತಿರೇಕಗಳಿಂದ ಕಾಣಲಿಲ್ಲ. ಶ್ರೀ ವಾದಿರಾಜ ಋಜುತ್ವ ಮಹಿಮಾದಲ್ಲಿ ಶ್ರೀ ವಾದಿರಾಜ ಋಜುತ್ವ ಮಹಿಮಾದಲ್ಲಿ ಅಚಲಶ್ರದ್ಧಾವುಳ್ಳವರೆಲ್ಲರೂ ತಮ್ಮವರೆಂಬ ಮನೋವೈಶಾಲ್ಯ ಅವರದಾಗಿತ್ತು. ಆ ಭಕುತರೆಲ್ಲರ ಅಧ್ಯಾತ್ಮಕಾದಿ ತಾಪತ್ರಯ ಪರಿಹಾರಕ್ಕೆ ಹಾಗೂ ಕ್ಷೇಮಕ್ಕೆ ನಿರಂತರ ಪ್ರಾರ್ಥಿಸುತ್ತ ಪರಿಹಾರೋಪಾಯವನ್ನು ಅವರಿಗೆಲ್ಲ ನೀಡಬಲ್ಲ ಧನ್ವಂತರಿಯಾಗಿದ್ದರು. ಶ್ರೀಗಳವರಿಗೆ

ಶ್ರೀ ಅನುಗ್ರಹದಿಂದ ಅನೇಕ ಕಲಾಜ್ಞಾನ ಕರಗತವಾಗಿತ್ತು. ವೇದಾಂತ, ಸಾಹಿತ್ಯ, ಸಂಗೀತ, ಆಯುರ್ವೇದ, ಹೋಮಿಯೋಪಥಿ, ಶಿಲ್ಪ, ಯೋಗ, ಧರ್ಮಶಾಸ್ತ್ರ ಮುಂತಾದವುಗಳಲ್ಲಿ ಪ್ರಗಲ್ಭಪಾಂಡಿತ್ಯವಿತ್ತು.

ಅಂದು ಶ್ರಾವಣ ಶುಕ್ಲ ಪಂಚಮಿ. ಸ್ಥಿರವಾದ ಎಂದಿನಂತೆ ಪ್ರಾತಃಸ್ನಾನಾದಿಗಳನ್ನು ಪೂರೈಸಿ ದೈವದಿಂದ ಆರಾಧ್ಯ ದೇವರನ್ನು ಪೂಜಿಸಿ ಶ್ರೀರಾಜರ ಪಂಚ ವೃಂದಾವನ ಹಾಗೂ ಶ್ರೀಭೂತರಾಜಾದಿ ಸನ್ನಿಧಿಯಲ್ಲಿ ಪೂಜಾದಿಗಳನ್ನು ಸಾಂಗಗೊಳಿಸಿದರು. ನೆರೆದ 400ಕ್ಕೂ ಹೆಚ್ಚು ಜನ ಭಕ್ತರಿಗೆ ತೀರ್ಥ ವಿತರಣೆ ಮಾಡಿದರು. ನಂತರ ಕೀರ್ತಿಶೇಷ ಶ್ರೀ ಗುರುಗೋವಿಂದ ವಿಠಲದಾಸರ ಆರಾಧನಾ ರಜತೋತ್ಸವವನ್ನು ಉದ್ಘಾಟಿಸಲು ಸೋದೆಮಠದ ರಾಜಾಂಗಣದ ವೇದಿಕೆಗೆ ಆಗಮಿಸಿದ್ದರು. ವೇದಘೋಷ ಪ್ರಾರ್ಥನೆಯ ನಂತರ ದೀಪ ಬೆಳಗಿ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಗುರುಗೋವಿಂದ ವಿಠಲದಾಸರು ಗೈದ ಶ್ರೀರಾಜರ ಋಜುತ್ವ ಮಹಿಮಾ ಪ್ರಸಾರಕ ಸೇವಾಭಾವವನ್ನು ಉಲ್ಲೇಖಿಸುತ್ತ ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳು ನಿಗದಿಯಾಗಿದ್ದವು. ಇವುಗಳನ್ನೆಲ್ಲಾ ಮುದ್ರಿಸುವ ಮೊದಲು ನಿಪ್ಪಾಣಿ ಆಚಾರ್ಯರಿಗೊಮ್ಮೆ ತೋರಿಸಿ ಎಂದು ಆಜ್ಞಾಪಿಸುತ್ತಾ ಮಂತ್ರಾಕ್ಷತೆ ಸಹಿತ ಆ ಪುಸ್ತಕವನ್ನು ದಾಸರ ಕೈಗಿತ್ತು. ಕೂಡಲೆ ಎರಡು ಕೈಗಳನ್ನು ಮೇಲಕ್ಕೆತ್ತಿ ರಾಮ ರಾಮ ರಾಮ ಎಂದು ಸ್ಪಷ್ಟ ನಾಮಸ್ಮರಣೆ ಮಾಡುತ್ತಾ ಯಾವುದೆ ವಿಕೃತ ವಿಕಾರವಿಲ್ಲದೆ ಪ್ರಸನ್ನ ಮುಖಭಾವದಿಂದ ಹರಿಪಾದ ಸೇರಿದರೂ ನಂತರವೂ ಪ್ರಸನ್ನ ಮುಖಭಾವ ಬಾಡಲಿಲ್ಲ ವಿಕಾರ ಕಾಣಲಿಲ್ಲ ಅಖಂಡ ಧ್ಯಾನ ನಿರತರಂತೆ ತೋರಿದರು.

ಯತೀಂದ್ರಚಂದ್ರ ಅಸ್ತಂಗತನಾದ. ತತ್ವ ಜ್ಞಾನಸೂರ್ಯ ಮರೆಯಾದ. ಶ್ರೀವಾದಿರಾಜ ಋಜುತ್ವಮಹಿಮಾಜ್ಞಾನಸಂಪನ್ನ ಸೇನಾಸೇನಾನಿ ಕಾಣದಾದ. ಸಜ್ಜನಿಕೆಯ ಮೂರ್ತ ರೂಪ ಅದೃಶ್ಯವಾಯಿತು. ಸದನುಷ್ಠಾನನಿಷ್ಣಾತ ದೂರನಾದ. ಸಿದ್ಧಾಂತದ ಸಿದ್ಧಂತಿ ಸಾಧನಸಾಗರದ ಫಲದಡ ಸೇರಿದ. ಶ್ರೀವಾದಿರಾಜಪ್ರಿಯರಾದ ಶ್ರೀಗಳವರು ಶ್ರೀವಾದಿರಾಜ ಪದಕಂಜ ಮಧೂವ್ರತರಾದರು. ತಡವಾಗಿ ಬಂದ ಭಕ್ತಸ್ತೋಮ ಗದ್ಗದಕಂಠವುಳ್ಳದ್ದಾಗಿ ಸನ್ನಿಧಿಯಲ್ಲಿ ಸ್ಥಂಡಿಲಶರಣವಾಯಿತು. ಗುರುಗಳು ದೃಶ್ಯರೂಪದಿಂದ ಕಾಣದೇ ಇದ್ದರೂ ತೇಜೋರೂಪದಿಂದ ಸನ್ನಿಹಿತರಾಗಿದ್ದಾರೆ. ವ್ಯಕ್ತಿಯಾಗಿ ತೋರದಿದ್ದರೂ ಶಕ್ತಿಯಾಗಿ ಸನಿಹದಲ್ಲಿದ್ದಾರೆ. ಸ್ಮರಿಸುವ ಭಕುತರ ಮನಸಿನಲ್ಲಿ ವಾಸನಾ ರೂಪದಿಂದಲೂ ಕಾಣುತ್ತಾರೆ.

ಇನ್ನು ಪೂಜಾತ್ಮ ಶ್ರೀಗಳವರ ಪುಣ್ಯ ಸ್ಮರಣೆ ನಮ್ಮ ಉಸಿರಾಗಲಿ, ಮಹಿತ ಮಹಾತ್ಮರ ಮಹಿಮಾ ಗುಣಗಾನ ನಿತ್ಯ ಅನುಸಂಧಾನವಾಗಲಿ. ಅವರ ಸನ್ನಿಧಿ ದರ್ಶನದ ಹಂಬಲ ಬದುಕಿಗೆ ಬೆಂಬಲವಾಗಲಿ. ಸಲ್ಲಕ್ಷಣಾಂಕಿತ ರೂಪ ಚಿಂತನೆ, ತತ್ವಚಿಂತನೆಗೆ ಚಿಲುಮೆಯಾಗಲಿ; ಅವರಿತ್ತ ಉಪದೇಶ ಚರಮೋಪದೇಶವಾಗಲಿ, ಮಂತ್ರೋಪದೇಶ ಮಂತ್ರಸಿದ್ಧಿಯನೀಯಲಿ, ಮಂತ್ರಾಕ್ಷತೆ ಅಕ್ಷಯ ಫಲ ನೀಡಲಿ.

ಪೂಜ್ಯ ಶ್ರೀಶ್ರೀವಿಶ್ವೋತ್ತಮತೀರ್ಥ ಶ್ರೀಪಾದರ ಕರಕಂಜಸಂಜಾತರೂ ಕಡುಕರುಣಪಾತ್ರರೂ ಸನ್ನಿಧಾನದ ಚಿಲಪ್ರತಿಮಾಸ್ಥಾನೀಯರೂ ಆದ ಶ್ರೀ ಶ್ರೀ ವಿಶ್ವವಲ್ಲಭತೀರ್ಥರು ನಮಗೆಲ್ಲಾ ಅನುಗ್ರಹದ ನೆಲೆಯಾಗಿ, ಸ್ಫೂರ್ತಿಯ ಸೆಲೆಯಾಗಿ, ಪ್ರೇರಕ ಶಕ್ತಿಯಾಗಿ ಚಿರಕಾಲ ಮೆರೆಯಲಿ. ಪೂಜ್ಯರಿಂದ ಶ್ರೀವಾದಿರಾಜರ ಋಜುತ್ವಮಹಿಮಾ ಪ್ರಸಾರ – ಪ್ರಚಾರಾದಿ ಕಾರ್ಯಗಳು ಊರ್ಜಿತವಾಗಿ ವಿಜೃಂಭಿಸಲಿ. ಗುರುಗಳ ಕನಸಿನ ಕೂಸಾದ "ಗುರುಕುಲ" ವು ಪೂಜ್ಯರ ಮಾರ್ಗದರ್ಶನದಲ್ಲಿ ಗುರುತರ ಸಾಧನೆಗೈಯುತ್ತಾ ಗುರಿಮುಟ್ಟಲಿ.

ಇನ್ನು ಮುಂದೆ ನಾವೆಲ್ಲಾ ಗುರುಶ್ರೀ ವಿಶ್ವೋತ್ತಮತೀರ್ಥರನ್ನು ಪೂಜ್ಯರಲ್ಲಿಯೇ ಕಾಣೋಣ. ಮತ್ತು ಡಾ। ನಿಡ್ಘಾಣಿ ಗುರುರಾಜರು ಬರೆದಿರುವ ಗ್ರಂಥದ ಮೂಲ ನನಗೆ ಲಭ್ಯವಾದುದರಿಂದ ಅದನ್ನು ಕಂಡು ಬರೆದಿರುವುದರಿಂದ ಅವರ ಆಶೀರ್ವಾದವು ನಮಗೆಲ್ಲಾ ಸಿಗಲೆಂದು ಶಿರಸಾ ಮನಸಾ ಬೇಡಿಕೊಳ್ಳುವ ಯು. ಬಾಲಚಂದ್ರ ರಾಯ್ಕರ್.

ವಿಶುದ್ಧ ವಿಜ್ಞಾನ ಘನ ಸ್ವರೂಪಂ
ವಿಜ್ಞಾನ ವಿಶ್ರಾಣನ ಬದ್ಧ ದೀಕ್ಷಂ
ದಯಾ ನಿಧಿಂ ದೇಹ ಭೃತಾಂ ಶರಣ್ಯಂ
ದೇವಂ ಹಯಗ್ರೀವಂ ಮಹಂ ಪ್ರಪದ್ಯೇ

ತಮ್ಮ ವಿಶ್ವಾಸಿ,
(ಯು. ಬಾಲಚಂದ್ರ ರಾಯ್ಕರ್)
ಯು. ಪಿ. ಎಸ್. ರಾಯ್ಕರ್
ಕೊಯಮುತ್ತೂರು

॥ ಶ್ರೀಪತಿರ್ಮಾನದೋ ನಃ ॥
॥ ಶ್ರೀಮದ್ವಾದಿರಾಜೋ ವಿಜಯತೇ ॥

ಅನುಗ್ರಹ ಸಂದೇಶ

ಭಗವಂತನ ನಾನಾವತಾರಗಳಲ್ಲಿ ಶ್ರೀಹಯಗ್ರೀವಾವತಾರ ಒಂದಾಗಿದ್ದು, ಬಹುಮುಖವೈಶಿಷ್ಟ್ಯವನ್ನು ಹೊಂದಿದೆ. ಜಗದ್ಗುರುಗಳಾದ ಶ್ರೀಮದಾಚಾರ್ಯರು ಶ್ರೀಹಯಗ್ರೀವ ದೇವರ ಕುರಿತಾಗಿ ಬಹುಸ್ಪಷ್ಟವಾದ, ಪ್ರಮಾಣಪ್ರಮಿತವಾದ ವಿಚಾರವನ್ನು ತಂತ್ರಸಾರದಿ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ಶ್ರೀಮದಾಚಾರ್ಯರ ಅನುಜರಾಗಿದ್ದ, ನಮ್ಮೀಸಂಸ್ಥಾನದ ಮೂಲಪುರುಷರಾಗಿದ್ದ ಶ್ರೀವಿಷ್ಣುತೀರ್ಥಾಚಾರ್ಯರು ಶ್ರೀಹಯಗ್ರೀವ ದೇವರ ವಿಶಿಷ್ಟ ಉಪಾಸಕರಾಗಿದ್ದರು. ಭಾವಿಸಮೀರರಾದ ಶ್ರೀವಾದಿರಾಜಗುರು-ಸಾರ್ವಭೌಮರು ಶ್ರೀವಿಷ್ಣುತೀರ್ಥಾಚಾರ್ಯರನ್ನು ಕುಮಾರಪರ್ವತದ ಬಳಿ ಸಂದರ್ಶಿಸಿದಾಗ, ಆ ಭೇಟಿಯ ಗುರುತೋ ಎಂಬಂತೆ ತಾವು ಪೂಜಿಸುತ್ತಿದ್ದ ಶ್ರೀಹಯಗ್ರೀವ ಮೂರ್ತಿಯನ್ನು ಶ್ರೀಗುರುರಾಜರಿಗೆ ನೀಡಿದ್ದರು. ಅಂದಿನಿಂದ ಆರಂಭಿಸಿ ಇಂದಿನವರೆಗೂ ಸಂಸ್ಥಾನದಲ್ಲಿ ಆ ಮೂರ್ತಿ ಅರ್ಚಿಸಲ್ಪಡುತ್ತಿದೆ. ಹೀಗೆ ನಮ್ಮೀ ಸಂಸ್ಥಾನದಲ್ಲಿ ಶ್ರೀಹಯಗ್ರೀವ ದೇವರ ಆರಾಧನೆ ಮೊದಲಿನಿಂದಲೂ ನಡೆದು ಬರುತ್ತಿದೆ.

ಶ್ರೀಗುರುರಾಜರ ಕಾಲದಲ್ಲಿ ಸ್ವರ್ಣಕಾರನೊಬ್ಬನ ಮೂಲಕ ಸಂಸ್ಥಾನಕ್ಕೆ ಗಜಾಸ್ಯ ಮೂರ್ತಿ ಹಯಾಸ್ಯ ಮೂರ್ತಿಯಾಗಿ ಪರಿವರ್ತನೆಗೊಂಡು ಸೇರಿತು. ಈ ಘಟನೆಯ ಮೂಲಕ ಸ್ವರ್ಣಕಾರ ಜನಾಂಗದವರು ಶ್ರೀಹಯಗ್ರೀವ ದೇವರನ್ನು ತಮ್ಮ ಕುಲದೇವರನ್ನಾಗಿ ಸ್ವೀಕರಿಸಿದ್ದು, ಶ್ರೀಗುರುರಾಜರ ಸಂಸ್ಥಾನವನ್ನು ಗುರುಮಠವನ್ನಾಗಿ ಸ್ವೀಕರಿಸಿದ್ದು ಇತಿಹಾಸವಾಗಿದೆ. ಶ್ರೀಹಯಗ್ರೀವ ದೇವರಲ್ಲಿ ಶ್ರೀಗುರುರಾಜರಲ್ಲಿ ಅನನ್ಯ ಶ್ರದ್ಧಾಭಕ್ತಿಯುಳ್ಳವರು ಈ ಸ್ವರ್ಣಕಾರ (ದೈವಜ್ಞ ಬ್ರಾಹ್ಮಣ)ರು ಆದ್ದರಿಂದಲೇ ಶ್ರೀಹರಿಗುರುಗಳ ಪರಾಮಾನುಗ್ರಹದಿಂದ ತಮ್ಮ ವೃತ್ತಿಕ್ಷೇತ್ರದಲ್ಲಿ ಅಪ್ರತಿಮ ಸಾಧನೆಯನ್ನು ಸಾಧಿಸುತ್ತಾ

ಕೀರ್ತಿವಂತರಾಗಿದ್ದಾರೆ.ಶ್ರೀಹರಿಗುರುಗಳ ಒಲುಮೆಯಿಂದ ಬದುಕು ಉನ್ನತಿಯನ್ನು ಪಡೆಯುತ್ತದೆ ಎಂಬುದಕ್ಕೆ ಇಲ್ಲಿ ನಿದರ್ಶನ ದೊರೆತಂತಾಗಿದೆ.

ಲೇಖಕರಾದ ಬಾಲಚಂದ್ರ ರಾಯ್ಕರ್ ರವರು ಶ್ರೀಹಯಗ್ರೀವ ದೇವರ ಕುರಿತು ಕಥೆಯನ್ನು ಸಂಗ್ರಹಿಸಿ ಪ್ರಕಟಿಸುತ್ತಿರುವುದು ಅಭಿನಂದನೀಯವಾಗಿದೆ. ಅವರಿಗೆ ಶ್ರೀಹರಿಗುರುಗಳು ಶ್ರೇಯಸ್ಸನ್ನುಂಟುಮಾಡಲಿ ಎಂದು ನಾವು ಹಯಗ್ರೀವ ದೇವರಲ್ಲಿ ಪ್ರಾರ್ಥಿಸುತ್ತೇವೆ.

ಉಡುಪಿ

ದಿನಾಂಕ ೧೦-೦೩-೨೦೦೮

ಇತ್ಯನೇಕನಾರಾಯಣ ಸ್ಮರಣೆಗಳು.

ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳವರು

ಶ್ರೀ ಸೋದೆ ವಾದಿರಾಜ ಮಠ, ಉಡುಪಿ

ಸುವರ್ಣ ಯುಗದಲ್ಲಿ ಸುವರ್ಣಕಾರನಾದ (ಕಲಾದಕ) ಕುಲಶೇಖರ ದೈವಜ್ಞ ಬ್ರಾಹ್ಮಣನಿಗೆ ಒಲಿದು ಬಂದ ಹಯಗ್ರೀವ

ಶುಕ್ಲಾಂಭರದರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನ ವದನ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ

ವಿಶುದ್ಧ ವಿಜ್ಞಾನ ಘನ ಸ್ವರೂಪಂ
ವಿಜ್ಞಾನ ವಿಶ್ರಾಣನ ಬದ್ಧ ದೀಕ್ಷಂ
ದಯಾ ನಿಧಿಂ ದೇಹ ಭೃತಾಂ ಶರಣ್ಯಂ
ದೇವಂ ಹಯಗ್ರೀವ ಮಹಂ ಪ್ರಪದ್ಯೇ

ಮಾನವರು ತಾವು ಧನ್ಯರಾಗುವುದಕ್ಕಾಗಿ ಪರಮಾತ್ಮನನ್ನು ಅನೇಕ ವಿಧದಿಂದ ಭಜಿಸುತ್ತಿರುವರು. ಪರಮಾತ್ಮನನ್ನು ಭಜಿಸಿದ್ದಾಗ ಅವರವರ ಭಕ್ತಿ ಭಾವಕ್ಕೆ ಮೆಚ್ಚಿ ತತ್ತದ್ಭಕ್ತಿಗುಚಿತವಾದ ಸ್ಥಾನಗಳನ್ನು ಕೊಟ್ಟು ಸಂರಕ್ಷಿಸುತ್ತಿರುವನು. ಅವರವರ ಸಂಚಿತಕ್ಕನುಗುಣವಾಗಿ ಅವರಿಗೆ ಒಂದೊಂದು ಶಕ್ತಿ ಉತ್ಪನ್ನವಾಗುತ್ತಿರುವುದು ಯಾವ ರೀತಿಯಲ್ಲಿ ಯೋಚಿಸಿದರೂ ಪರಮಾತ್ಮನು ಭಕ್ತನ ಭಕ್ತಿ ಭಾವವನ್ನು ನೋಡುವುದರಲ್ಲಿ ವಿಶೇಷವಾಗಿ ಚತುರನಾಗಿರುವನು. ಭಾವವಿಲ್ಲದ ಭಕ್ತಿ ಸಾಯುವವರೆಗೂ ಮಾಡಿದರೂ ನಿಷ್ಪ್ರಯೋಜನವೆಂಬುದು ಶೃತಿಯುಕ್ತಿ ಅನುಭವಗಳಿಂದ ಸಿದ್ಧವಾದ ಮಾತು. ಸೃಷ್ಟ್ಯಾದಿಯಿಂದ ಬಂದ ಮನು ಮುನಿ ದೇವದಾನವರೆಲ್ಲರೂ ತಮ್ಮ ವಿದ್ಯಾವೈದುಷ್ಯಗಳಿಂದ ಜನರನ್ನುಳಿಸಿದ್ದರೂ ಜಗಜ್ಜನಕನನ್ನು ಒಲಿಸುವುದು ಕೇವಲ ಭಕ್ತಿ ಭಾವದಿಂದಲೇ ಹೊರತು ಬೇರೊಂದು ಪದಾರ್ಥ ಯಾವುದು ಗಣನೆಗೆ ಬಂದಿಲ್ಲವೆಂದು ಇತಿಹಾಸಗಳಿಂದ ತಿಳಿದು ಬರುತ್ತಿರುವುದು ಎಂದು ನಮ್ಮ ಗುರು ವಾದಿರಾಜರು ಹಾಡಿದ ಕವಿತೆಯನ್ನು ನೆನಪಿನಲ್ಲಿ ಇಟ್ಟು ದೈವಜ್ಞ ಬಂಧು ಬಾಂಧವರಲ್ಲಿ ತಿಳಿಸುತ್ತೇನೆ. ಮತ್ತು ತಾಳುವಿಕೆಗಿಂತ ತಪವು ಇಲ್ಲ. ಕೇಳಬಲ್ಲವರಿಗೆ

ಹೇಳುವೆನು ಸೊಲ್ಲ ಎಂದು ವಾದಿರಾಜರು ಹೇಳುತ್ತಿದ್ದರು. ಅದೇ ರೀತಿಯಲ್ಲಿ ಪ್ರಥಮವಾಗಿ ನಮ್ಮ ಗುರು ವಾದಿರಾಜ ಗುರುಗಳನ್ನು ವಂದಿಸಿ ನಮ್ಮ ಪ್ರತ್ಯಕ್ಷ ಗುರು ವಿಶ್ವೋತ್ತಮ ಶ್ರೀಗಳ ಪಾದಾರವಿಂದಗಳಿಗೂ ವಂದಿಸಿ 14ನೇಯ ಶತಮಾನದಲ್ಲಿ ಜನಿಸಿದ ಅನೇಕ ಭಕ್ತ ಶಿಖಾಮಣಿ ದಾಸ ಕೂಟ ಕವಿಗಳನ್ನು ಯತಿವರ್ಯರನ್ನು ನೆನಸಿಕೊಂಡು ಅವರೆಲ್ಲರೂ ಹುಟ್ಟಿದ ಅವತಾರ ಕಾಲವನ್ನು ಸುವರ್ಣಯುಗವೆಂದು ನಿರ್ಧರಿಸಿದ ಆ ಕಾಲವನ್ನು ನಾವೆಲ್ಲರೂ ತಾಳುವಿಕೆಯಿಂದ ಕೇಳಿಯೂ ಓದಿಯೂ ತಿಳಿದುಕೊಳ್ಳಬಯಸಬೇಕು.

ಸುವರ್ಣ ಯುಗದಲ್ಲಿ ಅಂದರೆ 1400 ನಂತರ 1447ರಲ್ಲಿ ವ್ಯಾಸರಾಯರು. 1480 ರಲ್ಲಿ ವಾದಿರಾಜರು, 1485ರಲ್ಲಿ ಪುರಂದರದಾಸರು, 1509 ರಲ್ಲಿ ಕನಕದಾಸರು, ಅನೇಕ ಭಕ್ತರು ಹುಟ್ಟಿರುತ್ತಾರೆ. ಈ 100 ವರ್ಷ ಕಾಲದಲ್ಲಿ ಸಂತತುಕಾರಾಂ, ಗೋರಖನಾಥ, ಕನಕದಾಸರು, ವಿಜಯೀಂದ್ರರು, ಅಕ್ಷೋಭ್ಯ ಮಠದ ನಾರಾಯಣ ತೀರ್ಥರು, ಬೇಲೂರಿನ ವೈಕುಂಠದಾಸರು, ತಿರುಪತಿಯ ಅನ್ನಮಾಚಾರ್ಯರು ಮತ್ತು ಇನ್ನೂ ಅನೇಕ ಯತಿಗಳು, ಛತ್ರಪತಿ ಶಿವಾಜಿ, ಕೃಷ್ಣದೇವರಾಜರು ಇಂತಹ ಒಂದು ಶುಭ ಯುಗದಲ್ಲಿ ಜನಿಸಿ ನಮಗೆಲ್ಲಾ ಭಕ್ತಿ ಮಾರ್ಗವನ್ನು ತೋರಿಸಿದ್ದಾರೆ. ಈ ಗತ ವೈಭವ ಮುಖ್ಯಾಂಶವನ್ನು ನಾವು ತಿಳಿಯಬೇಕು. ಮುಖ್ಯವಾಗಿ ದೈವಜ್ಞ ಬ್ರಾಹ್ಮಣರಿಗೆ ಸುವರ್ಣಕಾರರಾದ ನಮಗೆ ಸುವರ್ಣ ಯುಗದಲ್ಲಿ ಲಭಿಸಿದ ಭಾಗ್ಯ ಹಯಗ್ರೀವ ದೇವರೆ ಒಲಿದು ಬಂದು ಗುರು ವಾದಿರಾಜರಿಂದ ಅನುಗ್ರಹಿಸಿದ ಭಾಗ್ಯವನ್ನು ನಾವೆಲ್ಲರು ತಿಳಿದುಕೊಳ್ಳಬೇಕು.

ಸುವರ್ಣಯುಗದಲ್ಲಿ ಸುವರ್ಣಕಾರನು ಮುಖ್ಯ ಕಥಾನಾಯಕನಾಗಿ ಅವತರಿಸಿದ್ದಾನೆ. ಶ್ರೀಮದ್ ವಾದಿರಾಜರು ಉಡುಪಿ ಸೋದೆಮಠದಲ್ಲಿ ನಮ್ಮನ್ನು ಶಿಷ್ಯರನ್ನಾಗಿ ಮಾಡಿದ್ದಾರೆ; ನಾವು ಸಿಹಿತಿಂಡಿಯ ರುಚಿಯನ್ನು ಮಾತ್ರ ಅನುಭವಿಸಿದರೆ ಸಾಲದು, ಅದನ್ನು ಹೇಗೆ ಮಾಡಿದರು ? ಎಂದು ಕೇಳಿ ತಿಳಿದುಕೊಂಡರೆ ಅದರಿಂದ ಇನ್ನೂ ಪ್ರಯೋಜನವಾಗುತ್ತದೆ. ಆದಕಾರಣ ನಮ್ಮ ಕುಲದಲ್ಲಿ ಹುಟ್ಟಿದ ಆ ಮಹಾನುಭಾವ ಆತನಿಗೆ ಹಯಗ್ರೀವ ದೇವರು ಒಲಿದು ತನ್ನ ಮನೆಯಲ್ಲಿ ಮೂರ್ತಿರೂಪದಲ್ಲಿ ಅವತರಿಸಿದ ನಿಜವಾಗಿ ನಡೆದ ವಿಷಯವನ್ನು

ಕಲ್ಪನಾ ಶಕ್ತಿಯಿಂದ ಹಿರಿಯರು ಹೇಳಿದ ಕಥೆಯನ್ನು ನಿಮಗೆಲ್ಲರಿಗೂ ತಿಳಿಸಲು ಬಯಸುತ್ತೇನೆ. ದಯವಿಟ್ಟು ತಾಳುವಿಕೆಯಿಂದ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ ಪೂರ್ವ ಕಾಲದಲ್ಲಿ ಈಗಿನ ಕಾಲದಂತೆ ಟಿ.ವಿ. ಅಥವಾ ಪ್ರೆಸ್ ರಿಪೋರ್ಟ್, ದಿನಪತ್ರಿಕೆ ಯಾವುದೂ ಇರಲಿಲ್ಲ. ಓಲೆಯಲ್ಲಿ ಬರೆದಿಟ್ಟದ್ದು ಇದ್ದಲ್ಲಿ ಅದನ್ನು ಉಪಯೋಗಿಸುವುದು.

ನಮ್ಮ ಗುರು ವಾದಿರಾಜರ ಕಾಲದಲ್ಲಿ ರಾಜರ ದಿನ ಚರಿತ್ರೆಯ (ಡೈರಿ) ಓಲೆಯನ್ನು ವಾದಿರಾಜರೇ ಗಂಗಾ ಪ್ರವಾಹದಲ್ಲಿ ತ್ಯಾಗ ಮಾಡಿದರು. ನಂತರ ಕೇಳಿ ತಿಳಿದುಕೊಂಡವರು. ಮುಖ್ಯವಾಗಿ ಬೇಕಾದ ವಿಷಯವನ್ನು ಹಲವರು ಬರೆದಿಟ್ಟಿದ್ದರು. ಅಂತಹ ಗ್ರಂಥದಲ್ಲಿ ಇದ್ದ ವಿಷಯವನ್ನು ಈಗ ನಾವು ತಿಳಿದುಕೊಂಡಿದ್ದೇವೆ. ಏನೇ ಇರಲಿ ಈಗ ದೈವಜ್ಞಬ್ರಾಹ್ಮಣರಾದ ನಾವು ತಿಳಿದುಕೊಳ್ಳಬಹುದಾದ ವಿಷಯ.

ನಮ್ಮ ಬಂಧು ದೈವಜ್ಞ ಬ್ರಾಹ್ಮಣ, ಬಂಗಾರು ಮಾಮನವರು, ಯೋಗನಿಷ್ಠ, ಶಿಲ್ಪಿ, ಜಾತಕಗಳನ್ನು ತಿಳಿದ ಜೋತಿಷ್ಯ ಮತ್ತು ಚಿನ್ನಾಭರಣಗಳನ್ನು ಮಾಡಲು ತಿಳಿದವನು ಮತ್ತು ದಾನ ಧರ್ಮವನ್ನು ಮಾಡಿ ಬ್ರಾಹ್ಮಣ್ಯವನ್ನು, ಜಪ – ತಪಗಳನ್ನು ದಿನಂಪ್ರತಿ ಮಾಡಿ ತನ್ನ ಊರಿನ ಜನರಿಗೆ ಪಂಚಾಯತಿಯಲ್ಲಿ ಮುಖ್ಯಸ್ಥನಾಗಿ ಬಾಳಿಕೊಂಡಿದ್ದ. ಆತನನ್ನು ಊರಿನ ಜನರು ಬಂಗಾರದ ಮನುಷ್ಯ ಎಂದು ಕರೆಯುತ್ತಿದ್ದರು. ಅವರಿಗೆ ಬಂಗಾರ ಮಾಮಾ, ಬಂಗಾರ ಶೇಟ್ ಎಂದು ಕರೆಯುತ್ತಿದ್ದರು.

ಅವರು ದಿನಂಪ್ರತಿ ಮುಂಜಾನೆ ಸೂರ್ಯೋದಯದ ಒಳಗೆ ಗೋವುಗಳನ್ನು ಸಂರಕ್ಷಣೆ ಮಾಡಿ, ತುಳಸಿ, ಹೂ ಗಿಡಗಳಿಗೆ ನೀರನ್ನು ಎರೆದು ತನ್ನ ಶೌಚ ಮತ್ತು ಸ್ನಾನವನ್ನೆಲ್ಲಾ ಮುಗಿಸಿ, ಜಪ–ತಪವನ್ನು ಮಾಡಿ ತನ್ನ ಶಿಷ್ಯರನ್ನು, ಮನೆಯಲ್ಲಿ ಇರತಕ್ಕ ಹೆಂಡತಿ ಮಕ್ಕಳನ್ನು ಸೇರಿಸಿ ದೇವಾಲಯಕ್ಕೆ ಹೋಗಿ ವಂದಿಸಿ ಅವರ ದಿನನಿತ್ಯದ ಕುಲಕಸಬನ್ನು ನಡೆಸುತ್ತಿದ್ದರು. ಮಧ್ಯ ಕಾಲದಲ್ಲಿ ಜಾತಕ ಕರ್ಮಗಳನ್ನು ಮಾಡುತ್ತಿದ್ದರು. ಮಧ್ಯಾಹ್ನಕಾಲದ ಪೂಜೆಯನ್ನು ಮುಗಿಸಿ, ಸಾಯಂಕಾಲವಾಯಿತೆಂದರೆ ಅವರು ಎಲ್ಲರನ್ನು ತನ್ನ ಎತ್ತಿನ ಗಾಡಿಯಲ್ಲಿ ಕುಳ್ಳಿರಿಸಿ, ಅಕ್ಕಪಕ್ಕದ ದೇವಾಲಯಕ್ಕೆ ಹೋಗಿ ದೇವರನ್ನು

ವಂದಿಸಿ, ಚಂದ್ರೋದಯದ ಒಳಗೆ ಬಂದು ಮನೆ ಬೆಳಗಿಸಿ ಸಂಜೆಯ ಸಂಧ್ಯಾವಂದನೆಯನ್ನು ಮಾಡಿ ದೇವರ ಭಜನೆಯನ್ನು ಮಾಡುವುದು ಅವರ ದಿನನಿತ್ಯದ ಕೆಲಸ. ಅವರಿಗೆ ತಕ್ಕಂತೆ ಶ್ರೀಮತಿ ಬಂಗಾರು ಮಾಮನವರು ಮರಾಠ ಹಾಡನ್ನು ದೇವರ ನಾಮಾವಳಿಯನ್ನು ಹಾಡಿದರೆಂದರೆ ಅವರ ವಠಾರವೇ ನಿಂತಲ್ಲೇ ನಿಂತು ಹಾಡನ್ನು ಕೇಳುತ್ತಿದ್ದರು.

ಒಂದು ದಿವಸ ಸಂಜೆ ಎಲ್ಲರೂ ದಿನಂಪ್ರತಿ ದೇವಾಲಯಕ್ಕೆ ಹೋಗುವಾಗ ಎತ್ತಿನ ಗಾಡಿಯಲ್ಲಿ ಕುಳಿತುಕೊಂಡು, ಎತ್ತಿನ ಗಾಡಿ ಓಡಿಸುವವನಿಗೂ ನಮ್ಮೆಲ್ಲರ ಭಾರವನ್ನು ಹೊತ್ತು ಎಳೆದುಕೊಂಡು ಹೋಗುವ ಎತ್ತಿಗೂ ಸಂತೋಷವಾಗಲೆಂದು ಒಂದು ಹಾಡನ್ನು ಹಾಡುತ್ತಾರೆ. ಭಯ್ ಗಾಡಿ ಭಯ್ಯ ಈ ಹಾಡನ್ನು ಹಾಡುತ್ತಾ ಮನೆಗೆ ಬಂದು ದೀಪ ಬೆಳಗಿಸಿ ಅವರ ಚಿಕ್ಕಪುಟ್ಟ ಮನೆಕೆಲಸವನ್ನು ಬೇಗನೆ ಮುಗಿಸಿ, ಬಂಗಾರು ಮಾಮನವರು ಪೂಜೆಗೆ ಕುಳಿತುಕೊಳ್ಳುತ್ತಾರೆ. ಸಂಜೆ ದೇವರ ನಾಮಾವಳಿಯನ್ನು ಹಾಡಲು ಅಕ್ಕಪಕ್ಕದ ಜನರೆಲ್ಲರೂ ಬಂದು ಸೇರಿ ಆರತಿಯನ್ನು ಮಾಡುವ ಸಮಯದಲ್ಲಿ ಹಾಡುತ್ತಾರೆ.

ಬಂಗಾರು ಮಾಮನವರ ಪತ್ನಿ ಸಾಯಂಕಾಲ ಪೂಜಾ ಸಮಯದಲ್ಲಿ ಅವರ ಮನೆದೇವರನ್ನು ಧ್ಯಾನಿಸುತ್ತಾ ಹೇ ದೇವೋತ್ತನೇ ಮಂಗಾಳಾಂಗನೇ ಬಂಗಾರ ಶೃಂಗಾರದ ಮನಮಂದಿರ ಮನಮಂಟಪದಲ್ಲಿರುವ ಮಂಗಾಳಾಂಗ, ಕಾಳಿಂಗ, ನರಸಿಂಗ, ಅಂಗಜ, ಜನಕ, ಸಾರಂಗ, ರಥಾಂಗಪಾಣಿ, ಸಂಗ ನಿಸ್ಸಂಗ, ಮಾತಂಗ ವಿಹಂಗ, ಪ್ಲವಂಗ ನಾಯಕ, ಸಂಗೀತ ಲೋಲಾ, ಗೋಪಾಂಗನೆಯರ ಅಂತರಂಗ ಸಂತಾಪ ಶ್ರೀ ಮನ್ನಾರಾಯಣ ಶ್ರೀ ಲಕ್ಷ್ಮೀಕಾಂತನು ಒಲಿಯುವ ಹಾಡನ್ನು ಹಾಡಿ ಆ ಶುಕ ಪ್ರಿಯನೇ ಸೇವಿಸು. ನಮ್ಮ ಸರ್ವೋತ್ತಮನೆ ಎಂದು ಬೇಡುತ್ತಾ ಪತಿಗೆ ಪೂಜಾ ದ್ರವ್ಯಗಳನ್ನು ಕೊಟ್ಟು ಸಹಕರಿಸಿ ತಾನು ಪರಮಾನಂದವನ್ನು ಪಡೆಯುತ್ತಿದ್ದಳು. ನಂತರ ಎಲ್ಲರೂ ಸೇರಿ ಭವವೆಂಬ ಅಡವಿಯಲ್ಲಿ ತಾಪತ್ರಯದಿ ಸಿಲುಕಿದವರಿಗೆ ಭಯಗೊಳ್ಳದಂತೆ, ಗೆಲ್ಲುವುದಕ್ಕೆ ಶ್ರೀ ಹರಿನಾಮ ಹೊರತಾಗಿ ಮತ್ತುಂಟೆ ಎನ್ನ ಮನವನ್ನು ನಿನ್ನ ಚರಣದೊಳಗಿಟ್ಟು ಸಲಹೋ ರಂಗನಾಥ, ಶ್ರೀ ರಘುನಾಥ ತಪ್ಪದೆ ದಿನ ದಿನ ನಿನ್ನನ್ನು

ವಂದಿಸಿ ಜಪಿಸುವೆವು. ನಂಬಿದೆ ನಿನ್ನಯಪಾದ, ಡಂಬ ತೊಲಗಿಸಿ ಡಿಂಭದೊಳಗೆ ಹರಿಯ ಬಿಂಬ ಪೊಳೆವಂತೆ ಮಾಡೋ ದೇವಾ ಎಂದು ಹೇಳುತ್ತಾ (ಡಂಬ =ಆಡಂಬರ, ಡಿಂಬ= ಶರೀರ) ದೀಪಾರಾಧನೆ ಮುಗಿಸಿ ತೀರ್ಥ ಪ್ರಸಾದವನ್ನು ಕೊಟ್ಟು ಬಂದವರೆಲ್ಲರೂ ಮನೆಗೆ ತೆರಳಿದರೂ ಮರುದಿನ ಮುಂಜಾನೆ ಶಿವಾಲಯಕ್ಕೆ ಹೋಗಿ ಸಂಗೀತ (ಭಜನೆ) ಸೇವೆಯನ್ನು ಸಲ್ಲಿಸುತ್ತಾ ತಯಾರು ಮಾಡುತ್ತಾ ಇರುತ್ತಾರೆ. ಶ್ರೀಮತಿ ಬಂಗಾರು ಮತ್ತು ಅವರ ಬಳಗದವರು ಕುಳಿತಾಗ

ಅಜ ಮನಸಿಜ ಜನನೀ

ಅಂಬುಜಪಾಣಿ ಭುಜಗ ಸನ್ನಿಭವೇಣಿ ನಿತ್ಯಕಲ್ಯಾಣಿ

ಶ್ರೀಧರಾಂ ದುರ್ಗಾಂ ಅಂಭ್ರಣಿ ನಿತ್ಯ ಕಲ್ಯಾಣಿ

ವೇದವೇದಾಂತ ಅಭಿಮಾನಿ ವಾರಿಜಪಾಣಿ

ಆದಿ ಮದ್ಯಾಂತ ಗುಣ ಶ್ರೇಣಿ

ಕಾರ್ಯಕಾರಣಿ ರೂಪಿಣಿ ಯಶಸ್ವಿನೀ

ಶ್ರೀಮತ್ ಸೌಭಾಗ್ಯ ಜನನಿಂ ನಿತ್ಯ ಕಲ್ಯಾಣಿ ಇಂದಿರೇಶ ಅರವಿಂದ ನಯನ ಮನೋಹರಧರನೆ ಶ್ರೀಧರನೆ

ಘೋರ ದುರಿತಗಳನ್ನು ದೂರ ಮಾಡಿಸೋ

ಅಪಾರ ಮಹಿಮನೆ ದೊರೆಯೇ ಹರಿಯೇ

ಎಂದು ಬೇಡುತ್ತಾ ಹಾಡುತ್ತಾ ಮಂಗಳಾರತಿ ನೈವೇದ್ಯಗಳನ್ನು ಸಮರ್ಪಿಸಿ ಅವಳ ಪತಿ ದೈವಜ್ಞ ಬ್ರಾಹ್ಮಣನು ಅನಂತಾನಂತ ಗೋವಿಂದ, ಅನಂತ ಫಲದಾಯಕ ಪ್ರದಕ್ಷಿಣಂ ಕರಿಷ್ಯಾಮಿ ಎಂದು ಬೇಡಿಕೊಂಡು ನಂತರ ದಿನಕ್ಕೊಂದು ಭಕ್ತಿ ಕಥಾ ಶ್ರವಣವನ್ನು ದೇವರ ಕಥೆಯನ್ನು ಹೇಳುತ್ತಿದ್ದರು. ಒಂದು ಕಥೆಯನ್ನು ಮಾತ್ರ ತಿಳಿಸುತ್ತೇನೆ. ಕೈಲಾಸದಲ್ಲಿ ಶಿವ ಪಾರ್ವತಿ ಗಣೇಶ, ಸುಬ್ರಹ್ಮಣ್ಯ ಮತ್ತು ಗಂಗೆ ಪಾರ್ವತಿ, ನಾಗ, ಮೂಷಿಕ, ಸಿಂಹ, ನಂದಿ, ನವಿಲು, ಇವರೆಲ್ಲರನ್ನು ಪೋಷಿಸಿ, ರಕ್ಷಿಸಿ, ಇಚ್ಚಿಸಿ ಹೊಣೆಗಾರನಾದ ಶಿವನಿಗೆ ಎಂತಹ ಕಷ್ಟ ಕಾಣಿರಿ ಎಂದು ಕಥೆಯನ್ನು ಆರಂಭಿಸಿದ.

ಮೊದಲು ಶಿವನ ಕೊರಳಲ್ಲಿ ಇರುವ ನಾಗನಿಗೆ ಗಣಪತಿಯ ಬಳಿ ಇರುವ ಮೂಷಿಕ ವೈರಿ, ಪಾರ್ವತಿಯ ಬಳಿ ಇರುವ ಸಿಂಹಕ್ಕೆ ಶಿವನ ಬಳಿ ಇರುವ ನಂದಿ ವೈರಿ, ಪಾರ್ವತಿಯನ್ನು ಕಂಡರೆ ಗಂಗೆಗೆ ಏನೋ ಅತೃಪ್ತಿ, ಸುಬ್ರಹ್ಮಣ್ಯನಲ್ಲಿರುವ ನವಿಲಿಗೆ ನಾಗನು ವೈರಿ, ಹೀಗೆ ಆ ಶಿವನು ಎಂತಹ ಸಹನಾ ಶಕ್ತಿ ಉಳ್ಳವನು, ಹಾಗೆಯೇ ಎಲ್ಲಾ ರಾಜ್ಯದಲ್ಲಿಯೂ ಮನೆ ಮನೆಗಳಲ್ಲಿ ಅತ್ತೆ–ಸೊಸೆ, ಅಣ್ಣ–ತಮ್ಮ, ಅಳಿಯ–ಭಾವ ಇವರೆಲ್ಲರ ಸ್ವಭಾವವನ್ನು ನಾವು ಹೇಗೆ ಬಗೆಹರಿಸುವುದೆಂದು ಆ ದಿನದ ಕತೆಯನ್ನು ಮುಗಿಸಿದರು.

ಬೆಳಿಗ್ಗೆ(ಮುಂಜಾನೆ)ಶಿವಾಲಯಕ್ಕೆ ಕುಟುಂಬ ಸಮೇತರಾಗಿ ಹೋಗಿ ಮಂಗಳಾರತಿಯನ್ನು ಮಾಡುವಾಗ ಶಂಭೂ ಶಂಕರ ಎಂಬ ಹಾಡನ್ನು ಹಾಡಿದ ನಂತರ ತೀರ್ಥಪ್ರಸಾದವನ್ನು ಸ್ವೀಕರಿಸಿ ಬಂಗಾರು ಮಾಮನವರು ಅವರ ಕಾರ್ಯಾಲಯಕ್ಕೆ ಬಂದು ಕುಳಿತು ಅವರ ಇಷ್ಟದೇವರನ್ನು ಕುಲದೇವರನ್ನೂ ವಂದಿಸಿ ಅವರ ಉದ್ಯೋಗವನ್ನು ಗಮನಿಸುತ್ತಿರುವಾಗ ಭೀಷ್ಮನಂತಿರುವ ಒಬ್ಬ ವ್ಯಕ್ತಿ ಬಂಗಾರು ಮಾಮನವರಲ್ಲಿ ಬಂದು ಕುಳಿತು, ನಮಾಸ್ಕಾರ ಶೇಟ್‌ಜೀಯವರೇ, ತಾವು ಈ ಊರಿನಲ್ಲಿ ಪ್ರಸಿದ್ಧಿ ಆಗಿದ್ದೀರಿ. ನಿಮ್ಮ ಕೈಕೆಲಸವನ್ನು ಕೇಳಿ ತಿಳಿದು ನಿಮ್ಮ ಕೈಯಿಂದ ಒಂದು ಗಣಪತಿ ವಿಗ್ರಹವನ್ನು ಮಾಡಲು ಬಂದಿರುತ್ತೇನೆ ಎಂದು ಹೇಳುತ್ತಾರೆ. ನಂತರ ಬಂದ ವ್ಯಕ್ತಿ ಪರ ಊರಿನಿಂದ ಬಂದವರು ಎಂದು ತಿಳಿದು. ವಿಷಯವನ್ನು ಅರಿತು ಭೀಷ್ಮನಂತಿರುವ ಮುಖ ತೇಜಸ್‌ನ್ನು ಕಂಡು ಸಂತೋಷಗೊಂಡು ಧನಿ, ತಾವು ಇವತ್ತು ನಮ್ಮ ಊರಿನಲ್ಲಿ ನಮ್ಮ ಮನೆಯಲ್ಲಿ ತಂಗಿ ನಾಳೆ ದಿವಸ ನಿಮ್ಮ ಊರಿಗೆ ಹೋಗಬಹುದು ಎಂದು ಹೇಳುತ್ತಾರೆ. ಅವರು ಸಹ ಒಪ್ಪಿಕೊಂಡಿರುತ್ತಾರೆ, ಸರಿ, ಬಂಗಾರು ಮಾಮನವರಿಗೆ ನಿಮಿಷ ನಿಮಿಷಕ್ಕೆ ಮನಸ್ಸು ತಲ್ಲಣಗೊಂಡು ನಿಂತಲ್ಲಿ ನಿಲ್ಲದೆ ಕುಳಿತಲ್ಲಿ ಕುಳಿತುಕೊಳ್ಳದೇ ಮನಸ್ಸು ಉತ್ಸಾಹ ಜಾಸ್ತಿಯಾಗಿತ್ತು.

ಬಂದ ಅತಿಥಿ(ಗಿರಾಕಿ) ಯವರನ್ನು ಕಂಡು ಧನಿ, ಇವತ್ತೇ ನಿಮ್ಮ ಕೆಲಸವನ್ನು ಆರಂಭಿಸುತ್ತೇನೆ. ನಾವು ಮೊದಲು ಜೇನು ಮೇಣದಲ್ಲಿ ಆಕೃತಿಯನ್ನು ಮಾಡಿ ನಿಮಗೆ ತೋರಿಸುತ್ತೇನೆ. ಅದನ್ನು ತಾವು ನೋಡಿದರೆ ಮುಂದಿನ ಕೆಲಸವನ್ನು ನಾವು ಮಾಡಬಹುದು ಎಂದು ಆರಂಭಿಸುತ್ತಾರೆ. ಮೇಣದಲ್ಲಿ ನಿಮಿಷ ಮಾತ್ರದಲ್ಲಿ ತಯಾರಾಯಿತು ಮಾಯಾ ರೂಪದಲ್ಲಿ ತಯಾರಾಯಿತು ಗಣಪತಿ ಮೇಣದ ಆಕೃತಿ. ಬಂಗಾರ ಮಾಮನವರು ಇಷ್ಟರವರೆಗೆ

ಮಾಡದ ಕೆಲಸ ತಯಾರಾಯಿತು. ಆಶ್ಚರ್ಯ! ಸರಿಯೆಂದು ಬಂದ ವ್ಯಕ್ತಿಗೆ ಅದನ್ನು ತೋರಿಸಿದರು. ನೆನಸಿದಂತೆ ಆಗಿದೆ ಎಂದರು. ಇನ್ನು ಕೆಲವು ನಿಮಿಷ ಕಳೆಯಿತು, ಬಂಗಾರ ಮಾಮನವರ ಕೈ ಸುಮ್ಮನಿರಲಿಲ್ಲ, ಅದಕ್ಕೆ ಮಣ್ಣಿನ ಲೇಪ (ಅದೇ ಅಚ್ಚು) ಹಚ್ಚಿ, ಮುಚ್ಚಿ, ಒಣಗಿದ ನಂತರ ಪಂಚಲೋಹವನ್ನು ಒಯ್ಯಬೇಕು, ಆ ಕೆಲಸವನ್ನು ಸಹ ಕೂಡಲೇ ಮಾಡಿ ಮುಗಿಸಿದರು. ಏನಪ್ಪಾ ಪಾಂಡುರಂಗ, ಇವತ್ತು ಏಕೆ ಇಷ್ಟೆಲ್ಲಾ ವೇಗದಲ್ಲಿ ಕೆಲಸ ಆಗುತ್ತದೆ ಎಂದು ಮನಸ್ಸಿನಲ್ಲಿ ಹೇಳುತ್ತಾ ಬಂದ ಅತಿಥಿಯನ್ನು ಕಂಡು ರಾಯರೇ, ನಿಮ್ಮ ಅದೃಷ್ಟವೋ ನೀವು ಬಂದ ಶುಭ ಮುಹೂರ್ತವೂ ತಿಳಿಯದು. ನನ್ನ ಇಷ್ಟು ವರ್ಷದ ಅನುಭವವನ್ನು ಮೀರಿ ನಿಮ್ಮ ಕೆಲಸವು ಮುಂದುವರಿಯುತ್ತಿದೆ ಎಂದು ಹೇಳಿ ಆ ಮಣ್ಣಿನಿಂದ ಲೇಪಿಸಿದ ಅಚ್ಚನ್ನು ಒಣಗಿಸಲು ಬಿಸಿಲಿನಲ್ಲಿ ಇಟ್ಟು ಮಧ್ಯಾಹ್ನ ಸಮಯವಾದ ಕಾರಣ, ಅವರ ಮಧ್ಯಾಹ್ನ ಕಾಲದ ಪೂಜೆಗೆಂದು ಸ್ನಾನಕ್ಕೆ ಹೊರಟು ದೇವರ ಪೂಜೆ, ಗೋಪೂಜೆ, ಅಗ್ನಿ ಪೂಜೆಯನ್ನು ಮುಗಿಸಿ ಬಂದ ಅತಿಥಿಗೆ ಊಟಕ್ಕೆ ಕರೆದು ಊಟ ಮುಗಿಸಿ ಸ್ವಲ್ಪ ವಿಶ್ರಾಂತಿ ಪಡೆಯಲು ಕುಳಿತು ಕೊಂಡಿರುತ್ತಾರೆ. ಇನ್ನು ಬಂಗಾರು ಮಾಮನವರು ಆ ವಿಗ್ರಹದ ಮಣ್ಣಿನ ಅಚ್ಚಿನ ಕಡೆ ಗಮನಿಸಲು ಹೋಗಿ ನೋಡುತ್ತಾರೆ. ನಾಲ್ಕು ದಿನಗಳಲ್ಲಿ ಒಣಗುವಂತ ಅಚ್ಚು ಕೂಡಲೇ ಒಣಗಿ ಅದರಿಂದ ಆಗುವ ಕೆಲಸಕ್ಕೆ ತಯಾರಾಗಿ ನಿಂತಿದೆ. ಏನಾಶ್ಚರ್ಯ ! ಏನೋ ಅದ್ಭುತ ನಡೆಯಲಿದೆ. ಎಂದು ಆಲೋಚಿಸುತ್ತಾ ಒಳಗೆ ಬಂದು ಅತಿಥಿಗಳು ತಂದ ಚಿನ್ನ, ಬೆಳ್ಳಿಯನ್ನು ಪಂಚಲೋಹವನ್ನು ಕರಗಿಸಿ ಒಯ್ಯುವ ಏರ್ಪಾಡನ್ನು ಮಾಡಿ ಅವರ ಕೆಲಸದವರನ್ನೇ ಕರೆದು ಪಂಚಲೋಹವನ್ನು ತಂದ ಅತಿಥಿಯ ಮುಂದೆಯೇ ಕರಗಿಸಿ ಅಚ್ಚಿನಲ್ಲಿ ಇರುವ ಮೇಣವನ್ನು ತೆಗೆದು ಕರಗಿಸಿದ ಪಂಚಲೋಹವನ್ನು ಒಯ್ಯುತ್ತಾರೆ. ಕೆಲವು ಸಮಯದ ನಂತರ ಅದು ತಣಿದು ತಣ್ಣಗಾದ ನಂತರ ಆ ವಿಗ್ರಹವಿರುವ ಕಡೆಗೆ ನೋಡಿದರೆ ಕೆಂಪಗಿನ ಸೂರ್ಯ ಪ್ರಕಾಶದಿಂದ ಪ್ರಕಾಶಿಸುವ ಭಯಂಕರ ಜ್ವಾಲೆಯಿಂದ ಕೂಡಿದ ದೃಶ್ಯ ಕಂಡ ಬಂಗಾರುಮಾಮನವರು ಕಣ್ಣುಕತ್ತಲೆಯಿಂದ ಬಿದ್ದು ನಂತರ ಆ ಜ್ವಾಲಾ ಆಕೃತಿಯನ್ನು ಕಂಡು ಕನಿಕರದಿಂದ ಅಳುತ್ತಾ, ಕರುಣಾಕರ, ವಿಘ್ನರಾಜ ನಾನೇನು ತಪ್ಪನ್ನು ಮಾಡಿದೆನಯ್ಯ ನಿನ್ನ ಕೆಲಸವನ್ನು ಮುಗಿಸಿ ಈಗ ನನಗೇಕೆ ಶೋಧಿಸುತ್ತಿರುವೆ. ಭಕ್ತವತ್ಸಲ ವಿಘ್ನರಾಜ, ಕ್ಷಮಿಸು ದಯೆತೋರು.

ಶಾಂತನಾಗು ಶಂಕರನ ಪುತ್ರ, ಶಿವ, ಶಿವ ಎಂದು ಗೋಳಿಡುತ್ತಾ ಹಗಲು ಇರುಳು ದೇವರ ನಾಮವನ್ನೇ ಹೇಳುತ್ತಾ ಕಾಲವನ್ನು ಕಳೆಯುವ ಸಂಗೀತ ಪ್ರಿಯೆ ಶ್ರೀಮತಿ ಬಂಗಾರುಮಾಮನವರು ಅವರ ಸ್ನೇಹಿತರನ್ನು ಕರೆದು ಗಣೇಶನಿಗೆ ದುಃಖದಿಂದ ಪ್ರಾರ್ಥನೆ ಮಾಡುತ್ತಾರೆ.

ದರುಶನ ದೀ ಗಜವದನ ಎಂಬ ಹಾಡನ್ನು ಹಾಡುತ್ತಾ ಇದ್ದಾರೆ. ಕ್ಷಣದೊಳಗೆ ಅಶರೀರವಾಣಿ(ಆಕಾಶವಾಣಿ) ಕೇಳಿದಂತೆ ಹಯಗ್ರೀವ ದೇವರು ಕಣ್ಣಿಗೆ ಕಾಣಿಸದೆ ದೈವಜ್ಞ ಜ್ಯೋತಿಯೇ ಭಕ್ತನೇ ಕುಲಶೇಖರನೆ ಜರಿಯಬೇಡ ಕೇಳು, ಚಿಂತಿಸದಿರು. ಮನಸನ್ನು ಕರಗಿಸದಿರು. ನಾನು ಪಂಚಲೋಹ ಭರಿತನಾಗಿ ಕರಗಿ ಚಂದ ರೀತಿಯಲ್ಲಿ ಸ್ವರೂಪವನ್ನು ಪಡೆದುಕೊಂಡಿದ್ದೇನೆ.

ನಿನ್ನ ಕೈಯಲ್ಲಿ ನಿರ್ಮಾಣಗೊಳ್ಳಲು ಒಲಿದು ಬಂದಿದ್ದೇನೆ. ನಾನು ಯಾರು ಎಂಬುವುದನ್ನು ನಿನಗೆ, ಭಕ್ತ ಯತಿ ಮಠಾಧಿಪತಿ ಜಗತ್ತಿಗೆ ಗುರುವಾಗುವ ಅವತಾರ ಪುರುಷ. ವಾದಿರಾಜನೆಂಬ ಯತಿ. ನಿಮ್ಮ ಊರಿನ ದೇವಾಲಯಕ್ಕೆ ಬಂದಿರುತ್ತಾನೆ. ಅವರಿಗೆಂದೇ ನಾನು ನಿಮ್ಮ ಮನೆಯಲ್ಲಿ ಮೂರ್ತಿ ರೂಪದಲ್ಲಿ ಅವತರಿಸಿದ್ದೇನೆ. ಶಾಂತನಾಗು. ಕೂಡಲೇ ನೀನು ನಿನ್ನ ಜನರು ಯಾರಾದರೂ ದೇವಸ್ಥಾನಕ್ಕೆ ಹೋಗಿ ಸ್ವಾಮೀಜಿಯನ್ನು ನಿನ್ನ ಮನೆಗೆ ಕರೆದುಕೊಂಡು ಬಾ, ನಂತರ ನಿನಗೆ ಎಲ್ಲಾ ವಿಷಯಗಳು ತಿಳಿಯುತ್ತದೆ ಎಂದು ಕೇಳಿಸುತ್ತದೆ.

ಒಡನೆ ಬಂಗಾರು ಮಾಮನವರು ಸಂತೋಷದಿಂದ ಹೂ ಫಲಗಳನ್ನು ಅವರ ಮನೆಯಲ್ಲಿರುವ ಜನರನ್ನು ಕರೆಯಿಸಿ ರಾಜರು ತಂಗಿದ ಸ್ಥಳವನ್ನು ತಿಳಿಸಿ ಕೊಟ್ಟು ಕಳಿಸುತ್ತಾರೆ. ಅದೇ ಸಮಯದಲ್ಲಿ ಶ್ರೀ ಮದ್‌ವಾದಿರಾಜಸ್ವಾಮಿಗಳು ದಶಾವತಾರ ಸ್ತುತಿಯನ್ನು ಅವರ ದೇವರ ಮುಂದೆ ಪಠಿಸುತ್ತಾ ಧ್ಯಾನದಲ್ಲಿ ಕುಳಿತಿರುವ ಸಮಯದಲ್ಲಿ ಅವರಿಗೂ ಜ್ಞಾನ ರೂಪದಲ್ಲಿ ಹಯಗ್ರೀವ ದೇವರು ಕಾಣಿಸಿ ಭಕ್ತ ಶಿಖಾಮಣಿ ನಿನ್ನ ಅವಶ್ಯವನ್ನು ಕಂಡು ನೀನು ನನ್ನ ಸಾಲಿಗ್ರಾಮವನ್ನು ಪೂಜಿಸುತ್ತಾ ಬಂದಿದ್ದೀ, ಲೋಕಕ್ಕೆ ನನ್ನ ಸ್ವರೂಪವನ್ನು ತೋರಿಸಲು ನಾನು ಈ ಊರಿನಲ್ಲಿ , ಭಕ್ತಿ ಮಾರ್ಗದಲ್ಲಿ ಇದ್ದಂತಹ ಒಬ್ಬ ದೈವಜ್ಞ ಬ್ರಾಹ್ಮಣನ ಸುವರ್ಣಕಾರನ ಮನೆಯಲ್ಲಿ ಮೂರ್ತಿ ರೂಪದಲ್ಲಿ ಅವತರಿಸಿದ್ದೇನೆ. ಆ

ಮೂರ್ತಿಯನ್ನು ನಿನ್ನ ಸಂಸ್ಥಾನ ಮಠದಲ್ಲಿ ಇಟ್ಟು ಪೂಜಿಸಿ ಧನ್ಯನಾಗು ಮತ್ತು ನಾನು ಅವತರಿಸಿದ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಾ. ನಿನ್ನನ್ನು ಕರೆದುಕೊಂಡು ಹೋಗಲು ಅವರು ಬರುತ್ತಿದ್ದಾರೆ ಎಂದು ಕೂಡಲೇ ಸ್ವಾಮಿಗಳು ಅವರ ಶಿಷ್ಯ ಮತ್ತು ವಿದ್ವಾಂಸರನ್ನು ಕರೆದು ವಿಷಯವನ್ನು ತಿಳಿಸುವುದರೊಳಗೆ ದೈವಜ್ಞ ಬಂಧು ಬಳಗದವರು ವಾದಿರಾಜರ ಮುಂದೆ ಭಯ ಭಕ್ತಿಯಿಂದ ಬಂದು ನಿಂತಿರುತ್ತಾರೆ. ಮಧ್ವ ಗುರುಗಳಾದ ಸ್ವಾಮಿಯವರು ಅವರನ್ನು ಕಂಡು ಯದ್‌ಭಾವಂ ತತ್ ಭವತಿ ಹೇಳುತ್ತಾ ನೀವು ಬಂದ ವಿಷಯವನ್ನು ನಾವು ಅರಿತಿದ್ದೇವೆ. ನಡೆಯುವ ನಿಮ್ಮ ಗೃಹಕ್ಕೆ ಎಂದು ಎಲ್ಲಾ ಮಧ್ವ ಬಾಂಧವರು ಗುರುಗಳೂ ಒಟ್ಟಿಗೆ ಹೊರಡುತ್ತಾರೆ.


ಗುರುಗಳು ಬಂಗಾರು ಮಾಮನವರಲ್ಲಿ ಬರುತ್ತಾರೆ ಎಂಬ ವಿಷಯವನ್ನು ಅರಿತ ಎಲ್ಲಾ ಜನರು ಅವರ ದಾರಿಯನ್ನೇ ಕಾಯುತ್ತಾ ಅವರವರ ಮನೆ ಮುಂದೆ ಸ್ವಚ್ಛಗೊಳಿಸಿ ರಂಗೋಲಿ ಮತ್ತು ಭಜನಾಗೋಷ್ಠಿ, ವಾದ್ಯದವರು ಬಂದು ನಿಂತಿರುತ್ತಾರೆ. ಆಗ ಗುರುರಾಜರು ಬಂದೇ ಬಿಟ್ಟರು.

ವಾದಿರಾಜರು ದೈವಜ್ಞನ ಮನೆಗೆ ಬಂದಾಗ ಗಂಧ ಕಸ್ತೂರಿ, ಕುಂಕುಮ, ರಂಜಿಪ ರಸದಿಂದ ಮಾಡಿದ ಓಕುಳಿಯನ್ನು ಆ ಗುರುಗಳಿಗೆ ಆರತಿಯನ್ನೆತ್ತಲು ನಾರಿಯರು ಅಂಗಳದ ಬಳಿ ಬಂದು ಬಳಿದು ಗಂಧದಾಸಾರಣಿಯನ್ನೆಳೆದು ಮುತ್ತಿನಾರತಿ, ಹಸಿರು ತೋರಣ, ಮಕರ ಕನ್ನಡಿಯನ್ನು ದ್ವಾರದಲ್ಲಿ ನಿಂತು ಮುತ್ತಿನಾರತಿ ಪಿಡಿದು ಕಾದು ನಿಂತಿದ್ದರು. ಶ್ರೀ ಗುರು ವಾದಿರಾಜರ ದಾರಿಯನ್ನು ಭಯ ಭಕ್ತಿಯಿಂದ ಅವರ ಪಾದವನ್ನು ನಮಿಸಲು ಕಾದುಕೊಂಡಿದ್ದ ಬಂಗಾರು ಮಾಮನವರು ಆನಂದ ಭಾಷ್ಪವನ್ನು ಸುರಿಸುತ್ತಾ ಸ್ವಾಮಿಗಳ ಪಾದ ಪೂಜೆಯನ್ನು ಮಾಡಿ ಅವರನ್ನು ತನ್ನ ಮನೆ ಒಳಗೆ ಕರೆದುಕೊಂಡು ಹೋಗುತ್ತಾರೆ. ಯೋಗ್ಯ ಆಸನವನ್ನು ಕೊಟ್ಟು ನಡೆದ ಸಂಗತಿಯನ್ನು ತಿಳಿಸುತ್ತಾರೆ.ಆ ಸಮಯದಲ್ಲಿ ವಾದಿರಾಜ ಗುರುಗಳು

ಯತ್ತದಗ್ರೇ ವಿಷಮಿದ ಪರಿಣಾಮೇ ಅಮೃತೋಪಯಂ ತತ್ಸುಖಂ ಎಂದು ನೆನೆಸುತ್ತಾ

ಗುರುಗಳು ದಿವ್ಯ ಜ್ಞಾನವುಳ್ಳ ಶೇಟ್‌ಜೀಯವರೇ ವಿಷಯವೆಲ್ಲಾ ನಾನು ಅರಿತಿರುವೆ.

ನೀನು ತಯಾರಿಸಿದ ಮೂರ್ತಿಯನ್ನು ತೋರಿಸು ಎಂದು ಅದರ ಪಕ್ಕದಲ್ಲಿ ಬಂದು ನೋಡುತ್ತಾರೆ.



ಜ್ವಾಲೇ ಇಲ್ಲ. ಬಿಸಿಯಿಲ್ಲ, ತಣ್ಣಗೆ ಹಸಿಮಣ್ಣಿನಂತಿತ್ತು. ಆ ಅಚ್ಚು. ಅದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಕೂಡಲೇ ರಾಜರು ಬಂಗಾರು ಶೇಟ್, ಆ ಅಚ್ಚನ್ನು ನಿನ್ನ ಕೈಯಲ್ಲಿ ತೆರೆದು ನೋಡು ಎಂದು ಹೇಳುತ್ತಾರೆ. ಬಂಗಾರು ಮಾಮನವರು ಅದನ್ನು ತಾನು ತಯಾರಿಸಿದ ಅಚ್ಚನ್ನು ಬಿಡಿಸಿ ನೋಡುತ್ತಾರೆ. ಏನು ಅದ್ಭುತ. ಒಂದು ಕೈಯಲ್ಲಿ ಶಂಖ, ಇನ್ನೊಂದು ಕೈಯಲ್ಲಿ ಮಣಿಸರ, ಇನ್ನೊಂದು ಕೈ ಅಭಯಹಸ್ತ ಮತ್ತು ಇನ್ನೊಂದು ಕೈಯಲ್ಲಿ ವೇದಗ್ರಂಥ ಚಂದ್ರಪ್ರಕಾಶದಿಂದ ಕಂಗೊಳಿಸುವ ವಿಗ್ರಹ, ಇದೇನಪ್ಪಾ ಎಂದು ಬಂಗಾರುಮಾಮನವರು ನೋಡುತ್ತಾ ಇದ್ದಾರೆ.

ಗುರು ವಾದಿರಾಜರು "ಜ್ಞಾನಾನಂದ ಮಯಂ ದೇವಂ ನಿರ್ಮಲ ಸ್ಫಟಿಕಾಕೃತಿಂ ಆಧಾರಂ ಸರ್ವ ವಿದ್ಯಾನಾಂ ಹಯಗ್ರೀವಂ ಉಪಾಸ್ಮಹೇ" ಎಂದು ಹೇಳುತ್ತಾ ದೈವಜ್ಞ ತಿಲಕನೇ ನೀನು ಧನ್ಯನು. ಈ ವಿಗ್ರಹ ಮಹಿಮೆಯನ್ನು ಹೇಳಿ ಆ ವಿಗ್ರಹಕ್ಕೆ ಬಾಕಿ ಸರಿಪಡಿಸುವ ಕೆಲಸವನ್ನು ಹೇಳಿ ಎಲ್ಲಾ ಕೆಲಸವು ಮುಗಿದ ನಂತರ ನಾನು ವಿಗ್ರಹವನ್ನು

ನಮ್ಮ ಸಂಸ್ಥಾನದಲ್ಲಿ ಪೂಜಿಸುವೆನು. ನಿನ್ನ ಅಭಿಪ್ರಾಯವೇನು ಎಂದು ಹೇಳುತ್ತಾರೆ.

ಬಂಗಾರು ಮಾಮನವರು ಹೇಳುತ್ತಾರೆ. ಗುರುವೇ ಶರಣು ನನಗೆ ವರ್ಣಿಸಿ ಹೇಳಲು ಬರುವುದಿಲ್ಲ ಆದರೆ ಒಂದು ಆಸೆಯನ್ನು ತಿಳಿಸುತ್ತೇನೆ. ಆ ಪರಮಾತ್ಮನ ವಿಗ್ರಹ ನಿಮ್ಮಲ್ಲಿ ಇರಲಿ. ಅವನ ಮಹಿಮೆ ಕರುಣೆಯಲ್ಲಾ ನಮ್ಮಲ್ಲಿ ಇರಲಿ ಅಷ್ಟೆ ನಮ್ಮೆಲ್ಲರ ಆಸೆ ಎಂದು ಹೇಳುತ್ತಾರೆ.

ರಾತ್ರಿ ಸಮಯವಾದ ಕಾರಣ ಕೂಡಲೇ ಅವರು ಅವರ ಜಾಗಕ್ಕೆ ತೆರಳಿದರು. ಮರುದಿನ ಬೆಳಿಗ್ಗೆ ಎಲ್ಲಾ ಕೆಲಸವನ್ನು ಮುಗಿಸುವ ಆಲೋಚನೆಯಲ್ಲಿ ಇದ್ದಾರೆ ಬಂಗಾರು ಮಾಮನವರು. ಇತ್ತ ಕಡೆ ದೈವಜ್ಞ ಬಂಧುಗಳು ಬಂಗಾರು ಮಾಮನವರನ್ನು ಹೊಗಳಿ ಅವರಿಗೆ ಸನ್ಮಾನ ಮಾಡಬೇಕೆಂದು ತಯಾರಾಗಿರುತ್ತಾರೆ. ಅದನ್ನೆಲ್ಲಾ ನಿರಾಕರಿಸಿ ರಾತ್ರಿಯನ್ನು ಕಳೆದು ಬೆಳಿಗ್ಗೆ ಆ ಮೂರ್ತಿಯನ್ನು ಸರಿಯಾಗಿ ಮೆರುಗು ಕೊಟ್ಟು ಕೆಲಸವನ್ನು ಮುಗಿಸುತ್ತಾರೆ.

ವಿಗ್ರಹವನ್ನು ಬೀಳ್ಕೊಡುವ ಸಂಭ್ರಮ ನಡೆಯುತ್ತಾ ಇದೆ. ಪಲ್ಲಕ್ಕಿ, ಬಿರುದಾವಳಿ, ವಾದ್ಯ, ಸಂಗೀತ ಮಂತ್ರೋದ್ಧಾರಕರ ಗುಂಪು ಎಲ್ಲವು ಮಠದಿಂದಲೂ ದೈವಜ್ಞ ಬಂಧು ಬಾಂಧವರಿಂದಲೂ ತಯಾರಾಗುತ್ತದೆ.

ಮೆರವಣಿಗೆ ಹೊರಟಿತು. ಎಲ್ಲರೂ ಆನಂದದಿಂದ ಜೈಕಾರದಿಂದ ದೇವರನಾಮ ಪಠಿಸುತ್ತಾ ಹಯವದನ ಮೂರ್ತಿ ರೂಪದಲ್ಲಿ ಅವತರಿಸಿದ ದಿವ್ಯ ಕೊಡುಗೆಯನ್ನು ಮನದಲ್ಲಿ ವರ್ಣಿಸುತ್ತಾ ಗುರು ವಾದಿರಾಜರು ಹಯಗ್ರೀವ ಸ್ತೋತ್ರವನ್ನು ಹಾಡುತ್ತಾ ಹಯಗ್ರೀವೋ ಮಹಾವಿಷ್ಣು ಕೇಶವೋ ಮಧುಸೂಧನಾ ಎಂದು ಭಜಿಸುತ್ತಾ ಕುಂಭ ಸಮೇತ ಹಿಡಿದು ಸ್ವಾಗತಿಸಲು ನಿಂತಿರುತ್ತಾರೆ.

ದೇವರ ವಿಗ್ರಹ ಬಂದ ಒಡನೆ ಮಠದೊಳಗೆ ಆಹ್ವಾನಿಸಿ ಯೋಗ್ಯ ಪೀಠದಲ್ಲಿ ಇರಿಸಿ ಎಲ್ಲರೂ ಒಟ್ಟು ಸೇರಿ, ಬಿಂಬ ಶುದ್ಧಿ, ಅಭಿಷೇಕ ಮಾಡಿ ಶಾಸ್ತ್ರೋಕಾರ್ಯಗಳನ್ನು ಮುಗಿಸಿ ಪಟ್ಟದ ದೇವರಿಡುವ ಜಾಗದಲ್ಲಿ ಇಟ್ಟು ಪ್ರಾಣ ಪ್ರತಿಷ್ಠೆಯನ್ನು ಮಾಡುತ್ತಿರುವಾಗ ಆ ದೈವಜ್ಞ ಬ್ರಾಹ್ಮಣರು

ದೇವನ ಕಂಡೆ. ಮುಕ್ತಿ ಈವನ ಕಂಡೆ

ಗೋವನು ಕಾಯುವ ಭೂದೇವ

ಬಲದೇವತಾನುಜ ನಿಜ ಹಯವದನ ಕಂಡೆ

ದೇವನ ಕಂಡೆ ಲಕುಮಿ ಲೋಲನ ಕಂಡೆ

ವೀರ ಶೂರ ಪರಾತ್ಪರ ವರ

ಅಕ್ರೂರವರದ ಸಿರಿವರನ ಕಂಡೆ

ಶ್ಯಾಮನ ಬಲುನಿಸ್ಸೀಮನ ಕಂಡೆ

ವಾಮನ ಭಾಮನ ಸೋಮನ ಕಂಡೆ

ಜಾಣನ ಬಲು ಪ್ರವೀಣನ ಕಂಡೆ

ನನ್ನ ಪ್ರಾಣನ ಗುಣ ಗಣ ಅಗಣಿತ

ಮಹಿಮ ಮಧುಸೂಧನನ ಕಂಡೆ

ಹಯವದನ ನಂದ ಕುಮಾರನ ಉಡುಪಿಯ ಶ್ರೀ ಶ್ರೀ ಶ್ರೀ ಜಗತ್ ಗುರು ವಾದಿರಾಜ ಮುನಿಗಳ ಕಂಡೆ ಎಂದು ಹಾಡಿದರು.

ಅನ್ನ ಸಂತರ್ಪಣೆಯನ್ನು ಮಾಡಿ ಗುರುಗಳು ದೈವಜ್ಞ ಬಂಧು ಬಾಂಧವರನ್ನು ಕುಳ್ಳಿರಿಸಿ ಅವರ ಯೋಗ ಕ್ಷೇಮವನ್ನು ಕೇಳಿ ಬಂಗಾರು ಶೇಟ್‌ನವರಲ್ಲಿ ಹೇಳುತ್ತಾರೆ. ತಾವು ನಮ್ಮ ಮಠಕ್ಕೆ ಇಷ್ಟು ಅಮೂಲ್ಯವಾದುದನ್ನು ಕೊಟ್ಟಿರುವಿರಿ. ನಿಮಗೆ ಇದರ ಪ್ರತಿಫಲವಾಗಿ ಏನು ಬಯಸುತ್ತೀರೋ ಅದನ್ನು ಸಂಕೋಚವಿಲ್ಲದೆ ಪಡೆಯಿರಿ ಎಂದು ಹೇಳುತ್ತಾರೆ. ಆಗ ಬಂಗಾರು ಶೇಟ್‌ನವರು ಹೇಳುತ್ತಾರೆ. ಪೂಜ್ಯ ಗುರುಗಳೇ ನಾನು ಹೇಳುವುದನ್ನು ತಪ್ಪಿದ್ದಲ್ಲಿ ಕ್ಷಮಿಸಿ ಕೇಳಬೇಕು.

ಫಲಕೊಟ್ಟರೆ ತಿಂದು ಮಾಯವಾಗುತ್ತದೆ.

ಸ್ಥಳ ಕೊಟ್ಟರೆ ಸ್ಥಳ ಇರುವಲ್ಲಿ ಮಾತ್ರ

ನಿಮ್ಮ ಬೆಂಬಲ ಸಿಕ್ಕಿದರೆ ಅಂದರೆ ಒಗ್ಗಟ್ಟು ಸಿಕ್ಕಿದರೆ ಅದು ಸ್ಥಿರ ಫಲವಾಗುತ್ತದೆ. ನಿಮ್ಮ ಅನುಗ್ರಹ ಅ ತಪನಿಧಿಯು ಸೂರ್ಯ ಚಂದ್ರನಿರುವವರೆಗೆ ನಮ್ಮ ಬಂಧುಗಳಿಗೂ ಮುಂದಿನ ಜನಾಂಗಕ್ಕೂ ನಿಮ್ಮ ಆಶೀರ್ವಾದ ಸಿಕ್ಕಿದರೆ ಅದೇ ಉತ್ತಮ. ಗಂಡ ಹೆಂಡತಿಯವರಲ್ಲಿ ಇರುವಂತಹ ಮಮತೆ, ತಾಯಿ ಮಗುವಿಗೆ ಇರುವ ಮಮತೆ, ಗುರು ಶಿಷ್ಯರಲ್ಲಿ ಇರುವ ಮಮತೆಯ ಪೂಜಾಫಲ, ಅದನ್ನು ತಾವು ಅನುಗ್ರಹಿಸಿರಿ ಎಂದು ಬಂಗಾರು ಶೇಟ್

ಹೇಳುತ್ತಾರೆ. ಗುರುಗಳು ಯಾಚಿಸುತ್ತಾರೆ ತುಳಸಿಗಿಡ ನೆಟ್ಟರೆ ಅರ್ಚನೆಗೆ, ಧರ್ಬೆಗಿಡ ನೆಟ್ಟರೆ ಶುಭ ಅಶುಭಕ್ಕೆ ಕಲ್ಪವೃಕ್ಷ (ತೆಂಗಿನಮರ) ನೆಟ್ಟರೆ ಅದು ಎಲ್ಲಾ ಕೆಲಸಕ್ಕೂ ಉಪಯೋಗವಾಗುತ್ತದೆ. ಇವರು ವ್ಯಾಪಾರಕ್ಕೆ ಸಂಬಂಧ ಪಟ್ಟಿದ್ದಾರೆ. ಇವರು ನಮ್ಮ ಮಠದ ಸೇವೆ ಮಾಡಲಿ ಎಂದು ಆಲೋಚಿಸಿ ಸರ್ವ ವಿದ್ಯಾನಾಂ ಹಯಗ್ರೀವಂಮುಪಾಸ್ಮಹೇ

ಹಯಗ್ರೀವ ದೇವರೆ ಒಲಿದು ಬಂದ ದೈವಜ್ಞ ಬ್ರಾಹ್ಮಣರನ್ನು ಶ್ರೀಮದ್ ವಾದಿರಾಜರು ಸಮಸ್ತ ದೈವಜ್ಞ ಬ್ರಾಹ್ಮಣರನ್ನು ನಮ್ಮ ಮಠದ ಮುಖ್ಯ ಶಿಷ್ಯರನ್ನಾಗಿ ಮಾಡಿದ್ದೇನೆಂತ ಘೋಷಿಸಿದರು ಮತ್ತು ಎಲ್ಲಾ ವಿದ್ವಾಂಸ ಶಿಷ್ಯನವರಲ್ಲಿ ಎಲ್ಲಾ ಮಠಾಧಿಪತಿಯವರಲ್ಲಿ ತಾಮ್ರಶಾಸನದಲ್ಲಿ ಬರೆದಿರುತ್ತಾರೆ. ಮತ್ತು ದೈವಜ್ಞ ಬ್ರಾಹ್ಮಣರಿಗೆ ದೀಕ್ಷೆ ಮತ್ತು ಮುದ್ರಾಧಾರಣೆಯನ್ನು ಮಾಡಿ ಮಧ್ವ ಕುಲದ ನಿಯಮ ಪೂಜಾ ಪದ್ಧತಿಯನ್ನು ತಿಳಿಸಿ ಆಶೀರ್ವದಿಸುತ್ತಾರೆ.

ಅಂದಿನಿಂದ ಇಂದಿನವರೆಗೂ ಸೋದೆ ಮಠದ ಆಚಾರ ವಿಚಾರಗಳನ್ನು ಮಧ್ವ ಸಂಪ್ರದಾಯಗಳನ್ನು ಅನುಸರಿಸಿ ಬಂದಿದ್ದಾರೆ ದೈವಜ್ಞ ಬ್ರಾಹ್ಮಣರು ಮತ್ತು ವರ್ಷಂಪ್ರತಿ ವಾದಿರಾಜರ ಆರಾಧನೆಗೆ ಬಂದು ಅಧಿಕವಾಗಿ ದೇಣಿಗೆಯನ್ನು ಸಲ್ಲಿಸುತ್ತಾರೆ.

ವಾದಿರಾಜರ ಶಿಷ್ಯರಲ್ಲಿ ದೈವಜ್ಞ ಬ್ರಾಹ್ಮಣರ ವೈಶಿಷ್ಟ್ಯವನ್ನು ಕಾಣಿರಿ

ಶ್ರೀ ವಾದಿರಾಜ ಗುರು ಸಾರ್ವಭೌಮರಿಗೆ ಶ್ರೀಮಧ್ವಾಚಾರ್ಯರಿಂದ ಶ್ರೀ ಮಠಕ್ಕೆ ಅನುಗ್ರಹಿಸಲ್ಪಟ್ಟ ಮೂಲ ವಿಗ್ರಹಗಳ ಜೊತೆಗೆ ಹತ್ತು ಹಲವು ದೇವತಾ ವಿಗ್ರಹಗಳು ಪ್ರಾಪ್ತವಾಗಿದ್ದರೂ ಹಯಗ್ರೀವ ವಿಗ್ರಹ ಮತ್ತು ಆ ಪರಮಾತ್ಮನು ಅವತಾರ ಮಾಡಿದ ದೈವಜ್ಞ ಬ್ರಾಹ್ಮಣ ಸಮುದಾಯದ ವೈಶಿಷ್ಟತೆಗಳು. ಭಾವೀಸಮೀರ ಶ್ರೀವಾದಿರಾಜ ಗುರು ಸಾರ್ವಭೌಮರ ಶಿಷ್ಯವರ್ಗದಲ್ಲಿ ಪ್ರಮುಖರಾದ ದೈವಜ್ಞಬ್ರಾಹ್ಮಣ ಪಂಗಡದವರು. ಇವರು ವೃತ್ತಿಯಿಂದ ಚಿನ್ನದ ಕೆಲಸ ಮಾಡುತ್ತಾದ್ದರಿಂದ ಗುರು ವಾದಿರಾಜರು ಇವರಿಗೆ ತಪ್ತ ಮುದ್ರಾಂಕನ ಮಾಡಿ ಶಿಷ್ಯರನ್ನಾಗಿ ಸ್ವೀಕರಿಸಿದರೂ ಸಹ ಕೆಲವು ಮಂದಿ ಈ ಜನಾಂಗದವರ ಬಗ್ಗೆ ಕುತೂಹಲ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಆದರೆ ಈ ದೈವಜ್ಞ ಬ್ರಾಹ್ಮಣರು, ಶಿಷ್ಟರೂ, ವಿಶಿಷ್ಟರೂ ಆಗಿದ್ದಾರೆ. ಈ ಬಗ್ಗೆ ವಿವರವಾಗಿ ನೋಡೋಣ.

ದೈವಜ್ಞ ಬ್ರಾಹ್ಮಣರಿಗೂ, ಶ್ರೀ ಗುರುವಾದಿರಾಜರಿಗೂ ಸಂಪರ್ಕ ಸೇತು ಶ್ರೀಹಯಗ್ರೀವ ದೇವರು. ಆ ಕಾಲದಲ್ಲಿ ಒಬ್ಬ ದೈವಜ್ಞನು, ಪಂಚಲೋಹದಿಂದ ಗಣಪತಿ ವಿಗ್ರಹ ಮಾಡಲು ದೈವ ಪ್ರೇರಣೆಯಿಂದ ಹಯಗ್ರೀವ ವಿಗ್ರಹವಾಗಿ ಮಾರ್ಪಟ್ಟಿತ್ತು. ಶ್ರೀಹಯವದನನು ದೈವಜ್ಞ ಬಂಗಾರುಮಾಮನವರ ಮನೆಯಲ್ಲಿ ತನ್ನ ಅವತಾರದ ಬಗ್ಗೆ ತಿಳಿದುಕೊಂಡಿದ್ದೇವೆ. ಅಲ್ಲದೆ ಆ ಪುಣ್ಯಾತ್ಮ ದೈವಜ್ಞ ಬ್ರಾಹ್ಮಣ ಗುರುವಾದಿರಾಜರಿಗೆ ಆ ವಿಗ್ರಹವನ್ನು ಅರ್ಪಿಸಿದನು. ಕೃತಾರ್ಥನಾದನು. ದೈವಜ್ಞಬ್ರಾಹ್ಮಣರ ಕೋರಿಕೆಯನ್ನು ಮನ್ನಿಸಿ, ವಾದಿರಾಜರು ಆ ಜನಾಂಗದವರಿಗೆ ಮಠದ ಮುಖ್ಯ ಶಿಷ್ಯರನ್ನಾಗಿ ಮಾಡಿ, ತಾಮ್ರ ಪತ್ರ ಬರೆದು ಇಟ್ಟಿದ್ದರು. ಆದರೆ ಶ್ರೀ ಹಯಗ್ರೀವ ದೇವರು ಓರ್ವ ದೈವಜ್ಞ ಬ್ರಾಹ್ಮಣನ ಮನೆಯಲ್ಲಿ ಅವತಾರ ಮಾಡಲು ಕಾರಣ ಆ ಜನಾಂಗದವರು ಶಿಷ್ಟರೂ, ವಿಶಿಷ್ಟರೂ ಆಗಿದ್ದಾರೆ. ಅವರು ದೇವರ ಅನುಗ್ರಹ ಪಡೆಯಲು ಪೂರ್ಣಪಾತ್ರರು ಎಂಬುದೇ ಆಗಿದೆ. ಇಲ್ಲದಿದ್ದರೆ ಬೇರೆ ಹಯಗ್ರೀವ ವಿಗ್ರಹಗಳಿದ್ದರೂ, ಕುದುರೆ ಸ್ವರೂಪದಿಂದ ಹಯವದನ ದೇವರು ಗುರುವಾದಿರಾಜರಿಗೆ ಪ್ರತ್ಯಕ್ಷವಾಗುತ್ತಿದ್ದದ್ದು ಈ ವಿಗ್ರಹದಿಂದಲೇ, ಜೈನರಾಜನು ಪಚ್ಚೆವಿಠಲಮೂರ್ತಿಯನ್ನು ವಾದಿರಾಜರಿಗೆ ಅರ್ಪಿಸಿದರೂ ವಾದಿರಾಜರು ಆತನನ್ನು ಶಿಷ್ಯನನ್ನಾಗಿ ಅಂಗೀಕರಿಸಲಿಲ್ಲ. ತಪ್ತ ಮುದ್ರಾಂಕನ ಮಾಡಲಿಲ್ಲ. ವಾದಿರಾಜರಿಂದ ಪರಮ ಅನುಗ್ರಹಿತನಾದ ಸ್ವಾದಿರಾಜನಾದ ಅರಸಪ್ಪ ನಾಯಕನಿಗೂ ಶಿಷ್ಯನಾಗುವ ಯೋಗ ಇರಲಿಲ್ಲ. ಬೇರೆಯವರು ವಾದಿರಾಜರ ಶಿಷ್ಯರಾದರೂ ಅವರಲ್ಲಿ ಪರಮಾತ್ಮ ಉದ್ಭವ ಆಗಲಿಲ್ಲ. ದೈವಜ್ಞ ಬ್ರಾಹ್ಮಣರು, ಶ್ರೀವಾದಿರಾಜರ ಶಿಷ್ಯರಲ್ಲಿಯೇ ವಿಶಿಷ್ಟರು ಎಂದು ಹೇಳಬಹುದಾಗಿದೆ ಮತ್ತು ಕೋಟೇಶ್ವರ ಗ್ರಾಮದವರನ್ನು ಅನುಗ್ರಹಿಸಿ ಶಿಷ್ಯರನ್ನಾಗಿ ಮಾಡಿಕೊಂಡದ್ದು.

ಮಾರ್ಜಾಲ ಕಿಶೋರ ನ್ಯಾಯ

ಬೆಕ್ಕು ತನ್ನ ಮರಿಗಳಿಗೆ ಒಂದಿಷ್ಟು ನೋವಾಗದಂತೆ ತನ್ನ ಬಾಯಿಂದಲೇ ಹಲ್ಲಿನಿಂದಲೆ ಕಚ್ಚಿ ಹಿಡಿದು ಒಂದೊಂದು ಕಡೆ ಸಾಗಿಸುತ್ತದೆ. ಇಲ್ಲಿ ಮಗುವಿನ ಪ್ರಯತ್ನ ಏನೇನು ಇಲ್ಲ.

ಮರ್ಕಟ ಕಿಶೋರ ನ್ಯಾಯ ಕೋತಿಯ ಮರಿಯು ತನ್ನ ತಾಯಿಯನ್ನು ಗಟ್ಟಿಯಾಗಿ ಬಿಗಿದಪ್ಪಿ ಕೊಂಡು ಇರುತ್ತದೆ. ರೆಂಬೆ ರೆಂಬೆಗೆ ಮರದಿಂದ ಮರಕ್ಕೆ ಹಾರುವ ತಾಯಿ ಕೋತಿಯು ತನ್ನ ಮರಿಯ ಬಗ್ಗೆ ಕಿಂಚಿತ್ತೂ ಗಮನ ಹರಿಸುವುದಿಲ್ಲ ಇದು ಮರ್ಕಟ ಕಿಶೋರ ನ್ಯಾಯ. ಈ ಮೇಲಿನ ನ್ಯಾಯಗಳಲ್ಲಿ ತಾಯಿಯನ್ನು ಭಗವಂತನಿಗೂ, ಮರಿಯನ್ನು, ಭಕ್ತರಿಗೂ ಹೋಲಿಸಬಹುದಾಗಿದೆ. ಭಕ್ತರು, ತಮ್ಮ ಮೋಕ್ಷ ಸಾಧನೆಗಾಗಿ, ಕೋತಿ ಮರಿಯಂತೆ ತಾಯಿಯನ್ನು, ಗಟ್ಟಿಯಾಗಿ ಹಿಡಿದಂತೆ ಪರಮಾತ್ಮನನ್ನು ಗಟ್ಟಿಯಾಗಿ ಆಶ್ರಯಿಸಿದ್ದಾರೆ. ಆದರೆ ಬೆಕ್ಕು ತನ್ನ ಮರಿಯನ್ನು ಜೋಪಾನ ಮಾಡುವಂತೆ, ಶ್ರೀಮನ್ನಾರಾಯಣನು ಹಯಗ್ರೀವ ರೂಪದಿಂದ, ತಾನಾಗಿ ದೈವಜ್ಞನ ಮನೆಯಲ್ಲಿ ಅವತರಿಸಿದ್ದಾನೆ. ಅವರನ್ನು ಒಲಿದು ಬಂದಿದ್ದಾನೆ. ಪರಮ ಪೂಜ್ಯ ಶ್ರೀಶ್ರೀವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಯಾವಾಗಲೂ ಈ ಮಾರ್ಜಾಲ ಕಿಶೋರನ್ಯಾಯ, ಮರ್ಕಟ, ಕಿಶೋರ ನ್ಯಾಯವನ್ನು ಉದಾಹರಣೆಯನ್ನು ಹೇಳುತ್ತಿದ್ದರು. ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾ ವಿಶ್ವೋತ್ತಮತೀರ್ಥ ಪಾದಾಂತರ್ಗತ ಭಾವಿ ಸಮೀರ ಮಧ್ವಾಧಿರಾಜ ಗುರು ಸಾರ್ವಭೌಮಾಂತರ್ಗತ, ಶ್ರೀಭಾರತಿರಮಣ, ಮುಖ್ಯಪ್ರಾಣಂತರ್ಗತ, ಶ್ರೀವೇದವ್ಯಾಸ ಶ್ರೀವೇದವ್ಯಾಸಾಂಭಿನ್ನ, ಭೂವರಾಹ ಶ್ರೀವೇದವ್ಯಾಸಾಂಭಿನ್ನ, ಭೂವರಾಹ ಶ್ರೀಹಯಗ್ರೀವ, ಲಕ್ಷ್ಮೀಹಯಗ್ರೀವ ದೇವರು ಸಕಲರಿಗೂ ಸರ್ವಾಭೀಷ್ಟವನ್ನು ಉಂಟುಮಾಡಲಿ ಎಂದು ಕುಗ್ಗಿ ಬಗ್ಗಿ ತಗ್ಗಿ ಹಿಗ್ಗಿ ಬೇಡಿಕೊಳ್ಳುವ ನಾನು ಶಬ್ದ ಸಾಂಗತ್ಯವನ್ನು ಶಬ್ದರೂಪ ಹಾಗೂ ಸರಿಯಾದ ಪ್ರಯೋಗ ಪ್ರಕಾರ ಅರಿತಿಲ್ಲ; ಹಾಗೆಯೇ ಶ್ಲೋಕರಚನೆ ಅವಶ್ಯಕವಾದ ಛಂದಸ್ಸಿನ ಪ್ರಕಾರ(ಬಗೆ) ವನ್ನು ತಿಳಿದಿಲ್ಲ; ವರ್ಣನೆಯ ಕೌಶಲ ಎನಗಿಲ್ಲ ಮತ್ತು ಮೊದಲು ನಂತರ ಎನ್ನುವ ಅನುಪೂರ್ವಿಯ ಬಗೆಯನ್ನು ನಾನು ತಿಳಿದಿಲ್ಲ. ಶ್ರೀಹರಿಯು ಅಲ್ಪಗುಣವುಳ್ಳವರಿಂದ ಸ್ತುತಿಸಲ್ಪಡುವುದಿಲ್ಲವೆ?

ಯು. ಬಾಲಚಂದ್ರರಾಯ್ಕರ್

ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕ
ಬಿರುದಾಲಂಕೃತರಾದ ಪ್ರಕೃತ ಪರ್ಯಾಯ
ಪೀಠಾರೂಢರಾಗಿರುವ ಶ್ರೀ ಅದಮಾರು ಮಠದ

ಶ್ರೀಶ್ರೀಮದ್ವಿಬುಧೇಶತೀರ್ಥಶ್ರೀಪಾದಂಗಳವರು

ನಮ್ಮ ಸಂಘವನ್ನು ಹರಸಿ ದಯಪಾಲಿಸಿದ

ಶುಭ ಸಂದೇಶ

ಉಡುಪಿ ದೈವಜ್ಞ ಬ್ರಾಹ್ಮಣರ ಭಜನಾ ಸಂಘದ ಅಧ್ಯಕ್ಷರಾದ ಶ್ರೀಮಾನ್ ಪದ್ಮನಾಭಶೇಟ್ ರಾಯ್ಕರ್ ಇವರಿಗೆ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು.

ಪರಮಾತ್ಮನ ಅನುಗ್ರಹವೇ ಸಕಲ ಪುರುಷಾರ್ಥಗಳಿಗೆ ಏಕೈಕ ಸಾಧನವೆಂಬುದನ್ನು ತಿಳಿದು ನವಜನಾಂಗವು ಈ ವಿಷಯವನ್ನು ಮರೆತು ತಪ್ಪು ಹಾದಿಯಲ್ಲಿ ನಡೆಯಬಾರದು ಎಂಬ ಪವಿತ್ರ ಉದ್ದೇಶದಿಂದ ನಿಮ್ಮ ಅಧ್ಯಕ್ಷತೆಯಲ್ಲಿ ಸಮಾಜದವರು ನಡೆಯಿಸುತ್ತಿರುವ ಈ ಭಜನಾ ಸಂಘದ ಕಾರ್ಯಕ್ರಮಗಳು ಅತ್ಯಂತ ಸ್ತುತ್ಯಗಳಾಗಿವೆಯಲ್ಲದೆ ಕಾಲೋಚಿತಗಳಾಗಿವೆ. ಇಂತಹ ಸತ್ಕಾರ್ಯಗಳಲ್ಲಿ ಪ್ರವೃತ್ತರಾದ ನಿಮಗೆಲ್ಲರಿಗೂ ಕಾರ್ಯನಿರ್ವಹಣೆಗೆ ಬೇಕಾದ ಶಕ್ತ್ಯುತ್ಸಾಹಗಳನ್ನೂ ಸತ್ಪ್ರೇರಣೆಯನ್ನೂ ಕೊಡೆಂದು ಶ್ರೀಕೃಷ್ಣನಲ್ಲಿ ಪ್ರಾರ್ಥಿಸುತ್ತೇವೆ.

ಉಡುಪಿ
2–9–1956

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು



ಶ್ರೀ ವಾದಿರಾಜ ಗುರು ಸಾರ್ವಭೌಮರು ದೈವಜ್ಞ ಬ್ರಾಹ್ಮಣರನ್ನು ಉದ್ಧರಿಸಿ ಪ್ರಿಯ ಶಿಷ್ಯರಾಗಿ ಸ್ವೀಕರಿಸಿದ ಇತಿಹಾಸದ ಕುರಿತು ಈ ಹೊತ್ತಗೆಯನ್ನು ಹೊರತಂದ ಶ್ರೀ ಬಾಲಚಂದ್ರಶೇಟ್ ರಾಯ್ಕರ್‌ರವರು ಇದನ್ನು ತಮ್ಮ ಮಾತಾ ಪಿತೃಗಳಾದ ದಿ. ಶ್ರೀ ಯು. ಪದ್ಮನಾಭ ಶೇಟ್ ರಾಯ್ಕರ್ ಮತ್ತು ಪಾರ್ವತಮ್ಮನವರ ನೆನಪಿಗೆ ತಮ್ಮ ತಂದೆಯವರ 108ನೇ ಜಯಂತಿಯಂದು ಅರ್ಪಿಸಿರುತ್ತಾರೆ. ದೈವಜ್ಞ ಬ್ರಾಹ್ಮಣ ಸಮುದಾಯದ ಖ್ಯಾತನಾಮರಾದ ಜಮೀನುದಾರ ದಿ. ಶ್ರೀ. ಯು. ಪಿ. ಎಸ್. ರಾಯ್ಕರ್‌ರವರು ಬಹುಮುಖ ಪ್ರತಿಭೆಯ ವ್ಯಕ್ತಿಯಾಗಿದ್ದರು. ಯಾವಾಗಲೂ ಅತಿಥಿ ಅಭ್ಯಾಗತರ ಕಲರವದಿಂದ ತುಂಬಿದ ಮನೆ. ಸ್ವತಃ ಕೃಷಿಯಲ್ಲಿ ಅನುಭವವಿದ್ದು ತಮ್ಮ ತೋಟ ಗದ್ದೆಗಳಲ್ಲಿ ಶ್ರಮಿಕರೊಂದಿಗೆ ತಾವೂ ದುಡಿಯುತ್ತಿದ್ದ ಅವರು ಪೈಲ್ವಾನರಾಗಿದ್ದರು. ತಮ್ಮ ಏರು ಜವ್ವನಿಕೆಯಲ್ಲಿ ಸುಮಾರು ಸಾವಿರ ಬಸ್ಕಿಗಳನ್ನು ದಿನಾಲೂ ತೆಗೆಯುತ್ತಿದ್ದ ಅವರು ಉತ್ತರ ಭಾರತದಿಂದ ಬಂದು ಸವಾಲೆಸೆದ ಪೈಲ್ವಾನರನ್ನು ಬಸ್ಕಿ, ಕುಸ್ತಿ ಇತ್ಯಾದಿ ಪಂಥದಲ್ಲಿ ಸೋಲಿಸಿದ್ದರೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ದಿ। ಪಾಡಿಗಾರು ಶೀನ ಶೆಟ್ಟರು ಮತ್ತೆ ಕೆಲವು ಗೆಳೆಯರೊಂದಿಗೆ ಸೇರಿ ತಮ್ಮದೇ ಆದ ಪೈಲ್ವಾನ್ ಅಖಾಡವನ್ನು ಹೊಂದಿದ್ದ ಶ್ರೀಯುತರ ಹಳೆಯ ಛಾಯಾಚಿತ್ರಗಳನ್ನು ಈಗಲೂ ಅವರ ಮನೆಯಲ್ಲಿ ಕಾಣಬಹುದು. ಅವರು ತಮ್ಮ ಮನೆಯಲ್ಲೇ ಸುಸಜ್ಜಿತವಾದ ಗರಡಿಶಾಲೆಯನ್ನು ಹೊಂದಿದ್ದರು. ತಮ್ಮ ವೇಗದ ಬೌಲಿಂಗ್‌ನಿಂದಾಗಿ ಉಡುಪಿ ಕ್ರಿಕೆಟ್ ಸಂಸ್ಥೆಯ ಪ್ರಮುಖ ಆಟಗಾರರಾಗಿದ್ದ ಅವರು ತಮ್ಮ ಪಂಗಡವು ಹಲವು

ಟ್ರೋಫಿಗಳನ್ನು ಗಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಮಣಿಪಾಲ ಪೈ ಕುಟುಂಬದ ಹಾಗೂ ದಿ। ಕೆ. ಕೆ. ಪೈಗಳ ನಿಕಟವರ್ತಿಗಳಾದ ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ಹಲವು ವರ್ಷಗಳ ಕಾಲ ಪರಿವೀಕ್ಷಣಾಧಿಕಾರಿಗಳಾಗಿ ದುಡಿದಿದ್ದರು. ತಮ್ಮ ನಿವೃತ್ತ ಜೀವನದಲ್ಲಿ ಬೆಳಗಿನ ಜಾವ ತೋಟದಲ್ಲಿ ಸಣ್ಣಪುಟ್ಟ ಕೆಲಸ ಮುಗಿಸುತ್ತಾ ನಂತರ ತಮ್ಮ ಮನೆಯಲ್ಲಿರುವ ಬಂಗಾರದ ಅನ್ನಪೂರ್ಣೇಶ್ವರಿಗೆ ತಾವು ಹಿಂದೂಸ್ತಾನಿ ಸಂಗೀತದಲ್ಲಿಯ ಪರಿಶ್ರಮದ ಅನುಭವದಿಂದಾಗಿ ಹೆಚ್ಚು ಮಂತ್ರಗಳು ತಿಳಿದಿಲ್ಲವಾದರೂ ತಮಗೆ ತಿಳಿದ ಕೆಲವೇ ಮಂತ್ರಗಳನ್ನು ಇಂಪಾಗಿ ಹೇಳುತ್ತಾ ಅಭಿಷೇಕ ನೈವೇದ್ಯಗಳೊಂದಿಗೆ ಸುಂದರವಾದ ಪೂಜೆಯನ್ನು ಮಾಡುತ್ತಾ ಕಾಲ ಕಳೆಯುತ್ತಿದ್ದರು. ಸದಾ ಕಾಲ ಅವರ ಮನೆ ಶಂಖ ಮತ್ತು ಘಂಟನಾದ ಸುತ್ತಮುತ್ತಲೂ ಅನುರಣಿಸುತ್ತಿತ್ತು. ಅತಿ ಸಜ್ಜನ ಮಿತಭಾಷಿಯಾದ ಅವರಿಗೆ ಅನುರೂಪವಾದ ಪತ್ನಿ ಪಾರ್ವತಮ್ಮನವರು. ನಸುಕಿನಲ್ಲೆದ್ದು ಕ್ಷಣಮಾತ್ರದಲ್ಲಿ ಮನೆಯೆದುರು ಸ್ವಚ್ಛಗೊಳಿಸಿ ಕಡಿಮೆಯೆಂದರೆ ಐದು ಚದುರಡಿಯ ರಂಗೋಲಿ ಬಿಡಿಸಿ ಮನೆವಾರ್ತೆ ಕೆಲಸಗಳನ್ನೂ ತೋಟದ ಕೆಲಸದಲ್ಲಿ ಪತಿಯೊಂದಿಗೆ ಸಹಕರಿಸುತ್ತಿದ್ದ ಅವರು ತಮ್ಮ ಹತ್ತಕ್ಕಿಂತಲೂ ಹೆಚ್ಚು ಬಿಡಾರಗಳಲ್ಲಿ ವಾಸಿಸುತ್ತಿದ್ದ ಬಾಡಿಗೆದಾರರಾಗಿದ್ದವರನ್ನು ಮಕ್ಕಳಂತೆ ಕಾಣುತ್ತಾ ಅವರ ಸುಖ ಕಷ್ಟಗಳಲ್ಲಿ ಭಾಗಿಯಾಗುತ್ತಿದ್ದರು.ಪ್ರತಿ ವರುಷ ಅವರ ಮನೆಯಲ್ಲಿ ಚೌತಿ ಮತ್ತು ನವರಾತ್ರಿ ಇತ್ಯಾದಿ ಹಬ್ಬಗಳು ಬಹುವಿಜೃಂಭಣೆಯಿಂದ ನಡೆಯುತ್ತಿದ್ದವು. ಚೌತಿಯಂದು 150 ಜನಕ್ಕಿಂತಲೂ ಹೆಚ್ಚು ಜನರ ಸಮಾರಾಧನೆ ಮತ್ತು ಪ್ರತಿ ನವರಾತ್ರಿ ಸಂಜೆ ಸುತ್ತಮುತ್ತಲ ಹೆಣ್ಮಕ್ಕಳು, ಗೃಹಿಣಿಯರಿಂದ ಭಜನೆ ಮತ್ತು ಬ್ರಾಹ್ಮಣರಿಂದ ಪಾರಾಯಣ ಪೂಜೆಯಾದಿಗಳು ಪಾರ್ವತಮ್ಮನವರ ಮೇಲ್ವಿಚಾರಣೆಯಲ್ಲಿ ಸಾಂಗವಾಗಿ ನಡೆಯುತ್ತಿತ್ತು. ಭೂಮಸೂದೆಯಿಂದ ಜಮೀನ್ದಾರಿಕೆಗೆ ವ್ಯತ್ಯಯವುಂಟಾದಾಗಲೂ ಪಾರ್ವತಿಮಾಯಿಯವರು ಅತಿಥಿ ಸತ್ಕಾರ ಹಾಗೂ ಹಬ್ಬ ಹರಿದಿನಗಳನ್ನು ಯಾವುದಕ್ಕೂ ಕೊರತೆ ಬಾರದಂತೆ ಅಚ್ಚುಕಟ್ಟಾಗಿ ನೆರವೇರಿಸುತ್ತಿದ್ದರು. ಇಂತಹ ಪುಣ್ಯ ಜೀವಿಗಳಾದ ದಂಪತಿಗಳ ನೆನಪಿಗೆ ಈ ಪುಸ್ತಕದ ಅರ್ಪಣೆ ಸ್ತುತ್ಯರ್ಹ.

– ಬೇಕಲ ಶಾಂತರಾಮ ರಾವ್

ಶ್ರೀ ಶ್ರೀ ಗುರು ವಿಶ್ವೋತ್ತಮ ತೀರ್ಥ ಪಾದಂಗಳವರ ಪಾದಕಮಲವನ್ನು ನಮಿಸುವೆ



ವಿತತ ವೈಭವ ಈ ಪರಿಯಲಿ
ಹಯವದನನ ಪ್ರತಿಮೆಯನು
ಸತತ ಪೂಜೆಯ ಮಾಳ್ವರೆ
ಅತಿ ಪ್ರೀತಿಯಿಂದಾ ಕುಮುದ ಬಂದು ಕ್ಷೇತ್ರದಲ್ಲಿ
ಕಮಲನಾಭನು ಇತ್ತು ಅದರಲಿ
ವಿಮಲ ಪೂಜೆಯಕೊಂಡನು ನಮ್ಮ ಗುರುಗಳಿಂದ

ಭಜಕ, ಭಕುತ ಸಂಸಾರ ಕ್ಲೇಶವನ್ನು ನಾಶಗೈಯುವ ಮಂದಹಾಸಯುತ ಹಿರಿದಾದ ಭಾವಗರ್ಭಿತ ಭಾಷಣವುಳ್ಳ ಯಾವಾಗಲು ನಿರ್ದಿಷ್ಟಶಾಸ್ತ್ರ ಗ್ರಂಥಾಲೋಕದಲ್ಲಿ ಆಸಕ್ತರಾದ ಜ್ಞಾನಪ್ರದರಾದ ಹಯಾಸ್ಯಪಾದಾರಾಧನ ಚಂಚರೀಕರಾದ ನಿರ್ದುಷ್ಟ ಶಾರೀರಿಕ ಲಕ್ಷಣ ಸಂಪನ್ನರಾದ ಕಾಮನ ಅಂದರೆ (ದುಷ್ಟ–ಇಚ್ಛೆ) ಪ್ರಭಾವವರ್ಜಿತರಾದ ಮತ್ತು ಅಲೆಗಳಂತೆ ನಿರಂತರ ಅಭೀಷ್ಟಪ್ರದರಾದ ಗುರು ಶ್ರೀವಿಶ್ವೋತ್ತಮತೀರ್ಥರನ್ನು ನಮಿಸುತ್ತೇನೆ.

ಶ್ರೀ ವಿಶ್ವವಲ್ಲಭತೀರ್ಥರ ಕರಕಮಲಗಳಿಂದ ಪೂಜಿತವಾದ ಮಹಿಮರೇ ಜಗತ್ಪತಿಯಾದ ಶ್ರೀಭಗವಂತನ ಪಾದಾರ್ಚನೆಯಿಂದ ದಿವ್ಯಕೀರ್ತಿ ಸಂಪನ್ನರೇ ಜಗತ್ತಿಗೆ ದ್ವಿತೀಯ ಈಶನೆಂದು ಪ್ರಸಿದ್ಧರಾದ, ಶ್ರೀ ವಾಯುದೇವರು ಹಾಗೂ ತತ್ವದಾರ್ಹ. ಶ್ರೀ ವಾದಿರಾಜ ಮಹಿಮಾಸಕ್ತ ಪೂಜ್ಯಾರಾದ ಶ್ರೀವಿಶ್ವೋತ್ತಮ. ಗುರುಗಳೇ ನಿಮಗೆ ನಮಸ್ಕಾರ. ನಿಮ್ಮ ಪುಣ್ಯನಾಮ ಕೊಂಡಾಡುವಲ್ಲಿ ಸಕ್ತವಾಗಲಿ ನನ್ನ ಮನಸ್ಸು ನಿಮ್ಮ ಕಮನೀಯ ರೂಪ ಚಿಂತನೆಯಿಂದ ಪವಿತ್ರವಾಗಲಿ.

ಕವಿದುಕೊಂಡಿರುವ ಪಾಪ
ಸವೆದು ಪೋಗುವಂತೆ ಮಾಡೊ
ಜೀವನದ ಬಾಧೆಯನ್ನು ಬಿಡಿಸೋ
ದೇವ ಶ್ರೀರಮಾತ್ರಿವಿಕ್ರಮ

ಗುರುಭಕ್ತಿಯು ನನ್ನನ್ನು ಗಾಢವಾಗಿ ಪ್ರೇರಿಸುತ್ತಿದೆ. ಆದ್ದರಿಂದ ನನಗೆ ತಿಳಿದಷ್ಟು ಹಾಗೂ ಸಾಧ್ಯವಾದಷ್ಟು ಪ್ರಯತ್ನಿದ್ದೇನೆ.

ನಿಮ್ಮಲ್ಲಿ ಬಗ್ಗಿ, ತಗ್ಗಿ, ತಗ್ಗಿಕುಗ್ಗಿ ನಮಿಸುವ

– ಯು. ಶಾರದಾ ಬಾಲಚಂದ್ರರಾಯ್ಕರ್

ಶ್ರೀ ವಾದಿರಾಜಭಕ್ತರಿಗೆ ಅಭೀಷ್ಟ ಸಮೂಹವನ್ನೆ ಕರುಣಿಸುವ
ಶ್ರೀ ವಿಶ್ವೋತ್ತಮ ತೀರ್ಥರೆಂಬ ಕಲ್ಪವೃಕ್ಷವನ್ನು ಯಾವಾಗಲೂ ನಮಿಸುವೆ

ಬಂದು ಜನರು ನನಗೆ ವಂದಿಸಿದಾಕ್ಷಣ ಬಂದ ಭಾಗ್ಯವೇನು
ಹಿಂದೆ ಮುಂದೆ ನನ್ನ ನಿಂದಿಸಿ ನುಡಿಯಲು ಕೊರತೆ ಕುಂದಾದದ್ದೇನು
ಯಾವತರದ ಭಯ.
ಶ್ರೀ ಗುರುವಾದಿರಾಜರ ಪರಮ ಪ್ರೀತಿಯನ್ನು ಪಡೆದವನಿಗೆ ಯಾವತರದ ಭಯ.
ಹಯವದನ ಗೋವಿಂದನನ್ನು ಮಾನಸ ಮಂದಿರದೊಳು ತಂದಿಟ್ಟು
ಗುರು, ಹಿರಿಯರಲಿ ಭಕುತಿ ವೈರಾಗ್ಯವನ್ನು ಇಟ್ಟು ಬಂಧನವ ಪರಿಹರಿಸು.
ದುಷ್ಟ ಜನರು ಬಲು ಕಷ್ಟ ಪಡಿಸುವುದನ್ನು, ಹಯಮುಖನೆ,
ನಿನ್ನ ವರಬಲದಯದಿಂದ ಸಲಹು.

ಪ್ರಿಯನೆಂದು ನಿನಗೆ ನಾ ದೈನ್ಯದಲ್ಲಿ ಮೊರೆ ಇಡುವೆ.
ನಾನು ನನ್ನದು ಎಂಬ ಹೀನ ಬುದ್ಧಿಯನ್ನು ತೊಲಗಿಸು ದೇವಾ.

ನಮ್ಮ ಶ್ರೀ ಹಯವದನ ದೇವರು
ಶ್ರೀ ಗುರುಗಳು ಸುಪ್ರಿತನಾಗಲಿ

– ಬಿ. ಅಮೃತ್‌ರಾಜ್ ಬಿ. ಎ.
ಅಮೆಟೂರ್ ಆರ್ಟಿಸ್ಟ್

ಈ ಸಮಯದಲ್ಲಿ ನಿಮ್ಮೆಲ್ಲರಲ್ಲಿ ತಿಳಿಸುವುದೇನೆಂದರೆ,

ಪರ್ಯಾಯ ಮಹೋತ್ಸವ ಕಾಲದಲ್ಲಿ ಎಲ್ಲಾ ಊರಿನ ದೈವಜ್ಞ ಬ್ರಾಹ್ಮಣ ಬಂಧು ಬಾಂಧವರಲ್ಲಿ ವಿಶೇಷವಾಗಿ ಶ್ರೀವಾದಿರಾಜ ಗುರುಗಳ ಚರಿತಾಮೃತವನ್ನು ತಿಳಿಯಿಸಿದ (ಕಡುಕರುಣಿ ಲೇಖನ)

ಕುಂದಾಪುರದಿಂದ ಹರೀಶಚಂದರ್ ಬುರ್ಡೆ
ಶ್ರೀ ಕೃಷ್ಣಮೂರ್ತಿ ಶೇಟ್ ಮತ್ತು ದಾವಣಗೆರೆಯ ದೈವಜ್ಞ ಬಂಧುಗಳು

ಮಧ್ವಾಧಿರಾಜ ಗುರು ಸಾರ್ವಭೌಮರು ಎಂಬ ಲೇಖನವನ್ನು ನಲ್ಲೂರು ಎಸ್. ರಾಜ್‌ಕುಮಾರ್ ಅವರು ಸಹಕರಿಸಿದ ಲೇಖನವನ್ನು ಪಡೆದು ಓದಿಕೊಳ್ಳಿರಿ.

ಇನ್ನೂ ಹಲವು ಪ್ರಕಾಶಕರ ಪುಸ್ತಕ ಲೇಖನವನ್ನು ತಿಳಿದು ಧನ್ಯರಾಗಿರಿ.

॥ ಹರಿ ಓಂ ॥

ಕುಹಕಿಗಳಿಗೆ ಕುಠಾರಪ್ರಾಯರಾದ ಶ್ರೀ ವಾದಿರಾಜತೀರ್ಥರು

ಕೋಟೇಶ್ವರ ಸೂರ್ಯನಾರಾಯಣರಾವ್
21/2 ಡಿವಿಜಿ.ರೋಡ್, ಬಸವನಗುಡಿ,
ಬೆಂಗಳೂರು– 560004

ಹದಿನಾರನೆಯ ಶತಮಾನದಲ್ಲಿ ಪ್ರಕಾಂಡ ಪಂಡಿತರಾಗಿ, ಸನಾತನ ಹಿಂದೂ ಧರ್ಮೋದ್ಧಾರಕರಾಗಿ, ದ್ವೈತಸಾಮ್ರಾಜ್ಯದ ಅಧಿಪತಿಯಾಗಿ ಬೆಳಗಿದ ಶ್ರೀ ವಾದಿರಾಜರ ಜೀವನದಲ್ಲಿ ಕೆಲವು ಅಪೂರ್ವ ಘಟನೆಗಳು ಪವಾಡಸದೃಶ್ಯವಾಗಿದ್ದು ಜನಮನದಲ್ಲಿ ಇಂದಿಗೂ ವಿರಾಜಿಸುತ್ತಿವೆ.

ತಮ್ಮ ಶಿಷ್ಯನಾದ ನಾರಾಯಣಾಚಾರ್ಯನೆಂಬವನಿಗೆ ಶಾಪಾನುಗ್ರಹವನ್ನಿತ್ತು ಆತನ ಮರಣಾನಂತರ ಭೂತರಾಜರೆಂಬ ಅಭಿದಾನ ನೀಡಿ ಸೋದಾಕ್ಷೇತ್ರಪಾಲಕನಾಗಿ ನೇಮಿಸಿದ ನಂತರ ಅದೃಶ್ಯನಾಗಿದ್ದುಕೊಂಡು ಶ್ರೀವಾದಿರಾಜತೀರ್ಥರ ಅಜ್ಞಾನಿವರ್ತಿಯಾಗಿರುವುದು ವಾದಿರಾಜ ಗುರುಚರಣ ಬಿಂದು 5 ಶ್ಲೋಕ 30 ರಿಂದ 35 ರಲ್ಲಿ ಉಲ್ಲೇಖಗೊಂಡಿರುವುದು ಸ್ಪಷ್ಟವಾಗಿದೆ.

ಒಮ್ಮೆ ಅವರ ಜೀವಿತದಲ್ಲಿ ಒಂದು ಅತ್ಯಪೂರ್ವ ಘಟನೆ ನಡೆದು ಸರ್ವರೂ ಅವರ ಅಲೌಕಿಕ ಸಾಮರ್ಥ್ಯವನ್ನು ಕಣ್ಣಾರೆ ನೋಡುವ ಸೌಭಾಗ್ಯ ಕೂಡಿ ಬಂತು. ಶ್ರೀವಾದಿರಾಜರು ಎಂದಿನಂತೆ ತಮ್ಮ ಪಲ್ಲಕ್ಕಿಯಲ್ಲಿ ಕುಳಿತು ಸಾಗಿದ್ದರು. ಅವರ ಪಲ್ಲಕ್ಕಿಯ ಮುಂಭಾಗವನ್ನು ಅದೃಶ್ಯ ರೂಪದಲ್ಲಿರುವ ಭೂತರಾಜರು ಹೊತ್ತಿದ್ದರು. ಹಿಂಭಾಗ ಮಠದ ಭಕ್ತಾದಿಗಳು ಹೊತ್ತು ಸಾಗಿರುವಾಗ ಇವರ ಸಾಮರ್ಥ್ಯವನ್ನು ಗೇಲಿ ಮಾಡಬೇಕೆಂಬ ದೃಷ್ಟಿಯಿಂದ ಕೆಲವು ಕ್ಷುದ್ರ ಪಿಶಾಚಿಗಳನ್ನು ವಶವಿರಿಸಿಕೊಂಡಿದ್ದ ಮಾಂತ್ರಿಕನೊಬ್ಬನು ವಾದಿರಾಜರ ಪಲ್ಲಕ್ಕಿಯ ಮುಂದೆ ತನ್ನ ಪಲ್ಲಕ್ಕಿಯಲ್ಲಿ ಕುಳಿತು ತನ್ನ ವಶವಿದ್ದ ಕ್ಷುದ್ರ ಪಿಶಾಚಿಗಳ ನೆರವಿನಿಂದ ಹೊರಿಸಿಕೊಂಡು ಸಾಗಿದ್ದನು. ಅವನ ಪಲ್ಲಕ್ಕಿಯ ಅಂತರಾಳದಲ್ಲಿ ಯಾವ ಸಹಾಯವಿಲ್ಲದೆ ಸಾಗುತ್ತಿತ್ತೆಂಬ ಭ್ರಮೆ ಬರುತ್ತಿತ್ತು.

ಆಗ ವಿಷಯವನ್ನು ಅರ್ಥಮಾಡಿಕೊಂಡ ವಾದಿರಾಜರು ಭೂತರಾಜರಿಗೆ ಆಜ್ಞೆ ನೀಡಿ ಆ ಪಿಶಾಚಿಗಳನ್ನು ನಾಶಪಡಿಸುವಂತೆ ಆಜ್ಞಾಪಿಸಿದರು. ಭೂತರಾಜರಿಂದ ನಾಶವಾದ ಪಿಶಾಚಿಗಳ ನೆರವಿನಿಂದ ಸಾಗುತ್ತಿದ್ದ ಮಾಂತ್ರಿಕನು ಪಲ್ಲಕ್ಕಿ ಸಹಿತ ದೊಪ್ಪೆಂದು ಭೂಮಿಗೆ ಬಿದ್ದು ದೇಹದಂಡನೆಗೊಳಗಾದ. ತನ್ನ ಅದೃಶ್ಯ ಸೇವಕ ಪಿಶಾಚಿಗಳ ನಾಶದಿಂದ ಕಂಗೆಟ್ಟ ಮಾಂತ್ರಿಕನು ಶ್ರೀವಾದಿರಾಜರಲ್ಲಿ ಶರಣುಬಂದನೆಂದು ಮೇಲ್ಕಾಣಿಸಿದ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಸನಾತನ ಹಿಂದೂ ಧರ್ಮದ ಬಾನಂಗಳದ ತಾರೆಯಾಗಿ ಬೆಳಗುತ್ತಿರುವ ಶ್ರೀವಾದಿರಾಜರ ಧವಳ ಕೀರ್ತಿಯನ್ನು ನಗೆ ಪಾಟಲಿಗೀಡಾಗಿಸಬೇಕೆಂಬ ಅಸೂಯಪರ ಕುಹಕಿಗಳು ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದರು.

ಒಮ್ಮೆ ಶ್ರೀವಾದಿರಾಜರು ಪರ್ಯಾಯ ಕಾಲದಲ್ಲಿ ಉತ್ಥಾನ ದ್ವಾದಶಿಯಂದು ಉಡುಪಿಯಲ್ಲಿ ಲಕ್ಷದೀಪೋತ್ಸವ ಆದರೆ ಅಂದು ಮೋಡ ಕವಿದು ಧಾರಕಾರವಾಗಿಮಳೆ ಸುರಿಯುತ್ತಿತ್ತು. ಇಂತಹ ಸಂದರ್ಭಕ್ಕಾಗಿ ಹೊಂಚುತ್ತಿದ್ದ ಕುಹಕಿಗಳು ಲಕ್ಷದೀಪೋತ್ಸವ ಮಳೆಪಾಲಾಯಿತೆಂದು ಅಪಪ್ರಚಾರ ನಡೆಸುತ್ತಿದ್ದರು.

ಆದರೆ ಧೈರ್ಯಗೆಡದ ಶ್ರೀವಾದಿರಾಜರು ಸಂಪೂರ್ಣ ದೀಪಗಳಿಗಾಗಿ ಕರ್ಪೂರವನ್ನು ತರಿಸುವ ವ್ಯವಸ್ಥೆ ಮಾಡಿ ಎರಡು ರಥಗಳನ್ನು ಸಿದ್ಧವಾಗಿರಿಸಿ ದೀಪೋತ್ಸವ ಸಂದರ್ಭ ಮಳೆ ನಿಲ್ಲುವಂತೆ ಶ್ರೀ ಹಯವದನನನ್ನು ವಿಶೇಷ ಗೀತೆ ರಚಿಸಿ ಭಕ್ತಿಪೂರ್ವಕವಾಗಿ ಮೊರೆಹೊಕ್ಕರು.

ಅನ್ಯಾಯೋಪಾರ್ಜಿತಂ ದ್ರವ್ಯಂ ದಶವರ್ಷಾಣಿ ತಿಷ್ಠತಿ।
ಪ್ರಾಪ್ತೇ ಚೈಕಾದಶೇ ವರ್ಷೆ ಸಮೂಲಂ ಚ ವಿನಶ್ಯತಿ॥

ಅನ್ಯಾಯದಿಂದ ಗಳಿಸಿದ ಹಣ ಬಹುಕಾಲ ನಿಲ್ಲದು. ಹೆಚ್ಚೆಂದರೆ ಹತ್ತುವರ್ಷ. ಹನ್ನೊಂದನೇ ವರ್ಷದಲ್ಲಿ ಸಮೂಲವಾಗಿ ನಷ್ಟವಾಗುವುದರಲ್ಲಿ ಸಂಶಯವಿಲ್ಲ.


"ಪಾಲ್ಗಡಲೊಡೆಯನೆ ಬಾರೋ ಮೇಲೆ ಕರುಣಾಮೃತದ ರಸ ಮಳೆಯ ಸುರಿಸುತಲಿ" ಎನ್ನುವ ಕೀರ್ತನೆ ಮುಗಿಯುತ್ತಿದ್ದಂತೆ ಅತ್ಯಂತ ದಟ್ಟ ಮೋಡ ಕವಿದಿದ್ದ ಬಾನಲ್ಲಿ ಮಳೆ ಹಠಾತ್ತಾಗಿ ಮೂರು ಮೈಲಿ ಪರಿಸರದಲ್ಲಿ ನಿಂತು ದೀಪೋತ್ಸವ ಸಾಂಗವಾಗಿ ನಡೆಯುವಂತೆ

ಹಯವದನನ ಒಲುಮೆ ಹರಿದು ಬಂತು. ಶ್ರೀಕೃಷ್ಣನ ದ್ವಾರಕೆಯೇ ಉಡುಪಿಗೆ ಇಳಿದು ಬಂದಂತೆ ಭವ್ಯವಾದ ದೀಪೋತ್ಸವ ಆತಂಕವಿಲ್ಲದೆ ನಡೆಯಿತು. ಸ್ವಾಮಿಗಳ ತೇಜೋವಧೆ ಮಾಡಬಯಸಿದ ಅಂತಃಶತ್ರಗಳು ತಾವು ಸ್ವತಃ ತೇಜೋವಧೆಗೀಡಾಗಿ ವಾದಿರಾಜರಿಗೆ ಶರಣು ಬಂದು ಅವರ ಕ್ಷಮಾಪಣೆ ಕೇಳಿದುದು ದೈವೀವಿಲಾಸ.

ಉಲ್ಲೇಖನೀಯ ಮತ್ತೊಂದು ಘಟನೆಯೆಂದರೆ ಮಹೋದಯ ಪುಣ್ಯಕಾಲ ಭಾನುವಾರ ಪದ್ಮಕಯೋಗದ ಪುಣ್ಯಪ್ರದ ದಿವಸದಂದು ಸಮುದ್ರಸ್ನಾನಕ್ಕಾಗಿ ಉಡುಪಿಯಿಂದ ಮೂರುಮೈಲಿ ದೂರದ ವಡಭಾಂಡೇಶ್ವರ ದೇವಾಲಯದ ಹತ್ತಿರ ಶಿಷ್ಯ ಪರಿವಾರದೊಡನೆ ಹೊರಟಿದ್ದಾಗ, ಅಂತರ್ಯದಲ್ಲಿ ವಾದಿರಾಜರನ್ನು ದ್ವೇಷಿಸುವ ಹಲವು ಅಂತಃ ಶತ್ರಗಳು ವಾದಿರಾಜರ ಪರಿವಾರದ ಮೇಲೆ ದೈಹಿಕ ಆಕ್ರಮಣಕ್ಕೆ ಈ ಸಂದರ್ಭ ಉಪಯೋಗಿಸಿಕೊಂಡರು. ಆಗ ಇಂದಿನಂತೆ ಸುಲಲಿತ ಹಾದಿಗಳಿರಲಿಲ್ಲ. ಕಾಡಿನ ವಾತಾವರಣದಲ್ಲಿ ನಡೆದು ಹೋಗಬೇಕಾಗುತ್ತಿತ್ತು. ವಡಭಾಂಡೇಶ್ವರ ಹತ್ತಿರ ಬಂದಂತೆ ಶತ್ರಗಳು ವಾದಿರಾಜರ ಪರಿವಾರದ ಮೇಲೆ ಆಕ್ರಮಣ ಮಾಡಿದಾಗ ಶಿಷ್ಯರೆಲ್ಲರೂ ದಿಕ್ಕಾಪಾಲಾದರೂ, ವಾಯ್ವಂಶ ಸಂಭೂತರಾದ ವಾದಿರಾಜರು ವಿಚಲಿತರಾಗದೆ ತಮ್ಮ ಕಮಂಡಲೋದಕವನ್ನು ಅವರ ಮೇಲೆ ಅಭಿಮಂತ್ರಿಸಿದಾಗ ಆಶ್ಚರ್ಯಜನಕವೆಂಬಂತೆ ಎಲ್ಲಾ ಆಕ್ರಮಣಕಾರರ ಮೈಮೇಲೆ ಬೊಬ್ಬೆಗಳೆದ್ದು ಅತೀವ ವೇದನೆಯನ್ನು ಅನುಭವಿಸುವಂಥಾದರು. ಆಗ ಸ್ವತಃ ಕರುಣಾಳುವಾದ ವಾದಿರಾಜರು ಅವರ ಆಕ್ರಂದನ ನೋಡಲಾರದೆ ಕರುಣೆಯಿಟ್ಟು ಕಮಂಡಲೋದಕದಿಂದ ಪ್ರತ್ಯೌಷಧಿ ನೀಡಿ ಅವರ ವೇದನೆಯನ್ನು ನಿವಾರಿಸಿದರು. ಆಗ ಶರಣು ಬಂದ ಅವರೆಲ್ಲರೂ ಅವರ ಆಸ್ತಿಕ ಶಿಷ್ಯರಾಗಿ ಜೀವನ ಪರ್ಯಂತ ಸೇವೆ ಮಾಡಿದುದು ಉಲ್ಲೇಖನೀಯ.

******

ಕ್ಷೇತ್ರಪಾಲಕರಾದ ಶ್ರೀಭೂತರಾಜರು ಶ್ರೀವಾದಿರಾಜ
ಗುರುಗಳ ನಿರಂತರ ಸೇವೆಗಾಗಿ ಸೋದೆಯಲ್ಲಿ
ಸನ್ನದ್ಧರಾಗಿದ್ದಾರೆ.



ಉತ್ತುಂಗ ತುರಗಾರೂಢಂ ಛತ್ರಚಾಮರ ಸೇವಿತಂ |
ಕ್ರೂರಂ ಘೋರಂ ತಥಾ ಶಾಂತಂ ಧನುಃ ಖಡ್ಗಾದಿ ಧಾರಿಣಮ್ ||
ಪ್ರತಾಪವಂತಂ ವೀರಾಗ್ರ್ಯಂ ವೀರಭದ್ರೋಪಮಂ ಹೃದಿ |
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಸ್ಮ್ಯಹಮ್ ||